# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಸಾಮರಸ್ಯ ವೇದಿಕೆ, ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಮಂಗಳೂರು ವಿಶ್ವವಿದ್ಯಾಲಯ, ಆಯೋಜಿಸಿದ್ದ ಕುದ್ಮುಲ್ ರಂಗರಾವ್ ಜಯಂತಿ ನಿಮಿತ್ತ ಉಪನ್ಯಾಸ 'ಸಾಮರಸ್ಯಕ್ಕೆ ಬೇಕು ತೆರೆದ ಮನಸ್ಸು' ಹಾಗೂ ಕಿರುಹೊತ್ತಿಗೆ ಬಿಡುಗಡೆ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಸಂಘಚಾಲಕ ಡಾ. ವಾಮನ್ ಶೆಣೈ, ಚ.ನಾ. ಶಂಕರರಾವ್, ಉಪನ್ಯಾಸಕ ರಾಜೇಶ್ ಪದ್ಮಾರ್ ಭಾಗವಹಿಸಿದ್ದರು.


ಸಂಪುಟ : 44 | ಸಂಚಿಕೆ : 7 | ಶುಭಕೃತ್ – ಆಷಾಢ/ಶ್ರಾವಣ | ಕಲಿಯುಗಾಬ್ದ 5124 | 15-07-2022 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಸೋತದ್ದು ಪಾಕಿಸ್ತಾನವಲ್ಲ ಕಪಟತನ..! ಗೆದ್ದದ್ದು ಭಾರತವಲ್ಲ, ಭರವಸೆ..!



ಮರೆವು ನಮಗಿರುವ ಒಳ್ಳೆಯ ಹಾಗೂ ಕೆಟ್ಟ ಗುಣ! ಕಹಿ ಘಟನೆಗಳನ್ನು ಮರೆಯುವುದಾದರೆ ಅದು ಒಳ್ಳೆಯದೇ ಆದರೆ ಈ ದೇಶದ ಪರಂಪರೆ, ಇತಿಹಾಸ, ಘನತೆ, ಶ್ರೇಷ್ಠತೆಗಳನ್ನು ಮರೆತರೆ ಮರೆವು ಕೆಟ್ಟದ್ದು ಅಲ್ಲವೆ? ಯುದ್ಧದಂತಹ ವೀರಗಾಥೆಗಳನ್ನು ಮರೆಯುವುದಾದರೆ ಅದಕ್ಕಿಂತ ಖೇದಕರ ಸಂಗತಿ ಏನಿದೆ?

ಯುದ್ಧವೆಂದರೆ ಕೇವಲ ಎರಡು ರಾಷ್ಟ್ರಗಳ ನಡುವಿನ ಕಿತ್ತಾಟವಲ್ಲ ಅಥವಾ ಸೈನಿಕರು ದಾಳಿಮಾಡಿ ಎದುರಾಳಿಗಳನ್ನು ನಾಶ ಮಾಡುವುದೆಂದಲ್ಲ. ಅದೊಂದು ಭಾವನಾತ್ಮಕ ವಿಚಾರ. ಅದಕ್ಕೆ ಬಹು ದೀರ್ಘಕಾಲದ ತಯಾರಿಬೇಕು. ಸರ್ಕಾರವೊಂದು ಸಾಕಷ್ಟು ಮುನ್ನೆಚ್ಚರಿಕೆ ತೆಗೆಕೊಂಡು ತನ್ನ ರಾಷ್ಟ್ರವನ್ನು ಮಾನಸಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಸನ್ನದ್ಧಗೋಳಿಸಿಕೊಳ್ಳಬೇಕು. ಸಂಬಂಧಪಟ್ಟ ಎಲ್ಲ ಇಲಾಖೆಗಳು ಪೂರಕವಾಗಿ ಕೆಲಸ ಮಾಡಲಾರಂಭಿಸಬೇಕು. ಅಲ್ಲದೆ ಜಗತ್ತಿನ ರಾಷ್ಟ್ರಗಳಿಗೆ ಯುದ್ಧದ ಅವಶ್ಯಕತೆಯನ್ನು ಮನಗಾಣಿಸಬೇಕು.! ಹೀಗೆ ಮೇಲಿನ ಎಲ್ಲವನ್ನೂ ಅಚ್ಚುಕಟ್ಟಾಗಿ ನಿಭಾಯಿಸಿ ರಾಷ್ಟ್ರಕ್ಕಾಗಿ ರಣಾಂಗಣದಲ್ಲಿ ಹೋರಾಡಿ ಮಡಿದ ವೀರ ಯೋಧರು ಜಯಿಸಿದ ಕಾರ್ಗಿಲ್ ವಿಜಯದ ಕಥನವನ್ನು ಒಮ್ಮೆ ಮೆಲುಕು ಹಾಕೋಣ.


ಭಾರತ ಅಣ್ವಸ್ತ್ರ ಪ್ರಯೋಗಿಸಿ 15 ದಿನಗಳಲ್ಲಿ ಪಾಕಿಸ್ತಾನ ಕೂಡಾ ಅಣು ಪರೀಕ್ಷೆ ನಡೆಸಿತ್ತು. ಪರಿಣಾಮ ಜಗತ್ತಿನ ರಾಷ್ಟ್ರಗಳು ಭಾರತ ಮತ್ತು ಪಾಕಿಸ್ತಾನದ ಮೇಲೆ ನಿರ್ಬಂಧ ಹೇರಿದವು. ಹುಟ್ಟುತ್ತಾ ಅಣ್ಣ ತಮ್ಮಂದಿರು, ಬೆಳೆಯುತ್ತಾ ದಾಯಾದಿಗಳೆಂಬಂತೆ ಬೇರೆಯಾಗಿದ್ದವರು ಸೇರುವ ಸಮಯ ಬಂದಿತ್ತು. ಭಾರತ ಹಿರಿಯಣ್ಣನಾಗಿ ಪಾಕಿಸ್ತಾನವನ್ನು ತಬ್ಬಿಕೊಳ್ಳಲು, ಸ್ನೇಹದ ಮಾತುಗಳನ್ನಾಡಲು ಕೈ ಚಾಚಿತು. ಅಂದಿನ ಭಾರತದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ 1999ರ ಫೆಬ್ರವರಿ 20ನೇ ತಾರೀಖು ಭಾರತದಿಂದ ಪಾಕಿಸ್ತಾನದತ್ತ ಬಸ್ಸೊಂದನ್ನು ಹೊರಡಿಸಿದರು. ಇತಿಹಾಸದ ಪುಟಕ್ಕೆ ಹೊಸ ದಾಖಲೆ ಸೇರಿಸುವ ಸಂತಸ. ಇನ್ನುಮುಂದೆ ನಾವಿಬ್ಬರೂ ವೈರಿಗಳಲ್ಲ! ಬಸ್ಸು-ರೈಲುಗಳ ಮೂಲಕ ಸಂಬಂಧ ಬೆಸೆಯಲಿರುವ ಹಳೆಯ ಗೆಳೆಯರು! ಅಖಂಡ ಭಾರತ ಮಾತೆಯ ಅಮೃತ ಪುತ್ರರು! ಪೂರ್ವಜರ ಪ್ರಮಾದಗಳನ್ನು ತಿದ್ದುವ ಪ್ರಜ್ಞಾವಂತ ಋಷಿ ಸಂತಾನರು ಎಂದು ಒಳಗೊಳಗೆ ಬೀಗಲಾರಂಭಿಸಿದ್ದರು (ಆದರೆ ವಾಸ್ತವ ಬೇರೆಯೇ ಇತ್ತು). ಸ್ವತಃ ಅಟಲ್‌ಜೀ ಎಲ್ಲ ಒತ್ತಡಗಳನ್ನು ಮೀರಿ ಪಾಕಿಸ್ತಾನಕ್ಕೆ ಹೊರಟರಷ್ಟೇ ಅಲ್ಲ ಲಾಹೋರ್ ಒಪ್ಪಂದಕ್ಕೆ ಸಹಿ ಹಾಕಿ, ಶಿಮ್ಲಾ ಒಪ್ಪಂದಕ್ಕೆ ಬದ್ಧರಾಗುವಂತೆ ಮತ್ತು ಜಮ್ಮು-ಕಾಶ್ಮೀರದ ಸಮಸ್ಯೆಗಳನ್ನು ತಮ್ಮೊಳಗೆ ಬಗೆಹರಿಸಿಕೊಳ್ಳುವಂತೆ ಭರವಸೆಯನ್ನು ಒಬ್ಬರಿಗೊಬ್ಬರು ವಿನಿಮಯ ಮಾಡಿಕೊಂಡರು.

ಪಾಕಿಸ್ತಾನ ನರಿ ಬುದ್ಧಿಯ ರಾಷ್ಟ್ರ. ಅಲ್ಲಿ ಈ ಕೊಟ್ಟ ಮಾತುಗಳಿಗಾಗಲಿ, ಇಟ್ಟ ಭರವಸೆಗಳಿಗಾಗಲಿ ಬೆಲೆ ಇಲ್ಲ. ಧರ್ಮಾಂಧತೆಯೆ ತುಂಬಿದ ಆ ದೇಶ ಎಂದೂ ತನ್ನ ಮೂಲ ಮನೋಧರ್ಮದ ಗುಣ ಬಿಡದು. ಹೀಗಾಗಿಯೇ ಇತ್ತ "ಜಂಟಲ್ ಮನ್" ಒಪ್ಪಂದದ ಕರಾರುಗಳನ್ನು ಮರೆತು ಲಾಹೋರ್ ಘೋಷಣೆಗೆ ಅಂಕಿತ ಬಿದ್ದ ಐದೇ ವಾರಗಳಲ್ಲಿ ಅಂದರೆ 1999 ಮಾರ್ಚ್ 28ರ ವೇಳೆಗೆ ಕಾರ್ಗಿಲ್ ಬೆಟ್ಟಗಳತ್ತ ಪಾಕಿಸ್ತಾನಿ ಸೇನೆ ದಾಳಿಗೆಂದು ಕಾಲಿಟ್ಟಿತ್ತು. ಪಾಕಿಸ್ತಾನ ಭಾರತದೊಂದಿಗೆ 1948, 1965, 1971ರ ಮೂರು ನೇರ ಯುದ್ಧಗಳಲ್ಲಿ ಸೋಲುಂಡಮೇಲೆ ಈ ಬಾರಿ ಛದ್ಮಯುದ್ಧದ ಮಾರ್ಗಹಿಡಿಯಿತು. ಪಾಕೀ ಸೈನ್ಯ ಹಾಗೂ ಐಎಸ್‌ಐಗಳು ಸಮರ್ಥ ಯೋಜನೆಗಳನ್ನು ರೂಪಿಸಿದ್ದವು. ಯೋಜನೆಯಂತೆ ಭಾರತದ ಸೇನೆಯ ದಿಕ್ಕು ತಪ್ಪಿಸಲು ಪಾಕ್ ಆಕ್ರಮಿತ ಜಿಲ್ಲೆಗಳಾದ ಅಜೌರಿ, ಪೂಂಚ್, ಗಂದರ್‌ಬಾಲ್, ಅನಂತನಾಗ್‌ಗಳಲ್ಲಿ ಭಯೋತ್ಪಾದಕ ಕೃತ್ಯ ಮಿತಿ ಮೀರಿತು. ಪಾಕಿಸ್ತಾನದ ಸೇನಾ ಮುಖ್ಯಸ್ಥ ಫರ್ವೇಜ್ ಮುಷರ್ರಫ್ ತಡಮಾಡಲಿಲ್ಲ 'ಆಪರೇಷನ್ ಬದ್ರ್'ಗೆ ಚಾಲನೆ ನೀಡಿದರು. ಶತ್ರುಗಳಿಗೆ ತಿಳಿಯುವ ಮುನ್ನ ಎತ್ತರದ ಗುಡ್ಡಗಳನ್ನು ವಶಪಡಿಸಿಕೊಳ್ಳುವುದೇ ಈ ಯೋಜನೆಯ ಗುರಿಯಾಗಿತ್ತು. ಮೇ 8ರ ಹೊತ್ತಿಗೆ ಪಾಕೀಗಳು ಗುಡ್ಡಗಳನ್ನು ಆಕ್ರಮಿಸಿ ಬಂಕರುಗಳಲ್ಲಿ ಕುಳಿತುಬಿಟ್ಟರು. ಮರುದಿನ ಸೇನಾ ಠಾಣ್ಯಕ್ಕೆ ದನಗಾಯಿಗಳು ಸುದ್ದಿ ತಲುಪಿಸಿದರು.

ಮರುದಿನವೇ ಸೇನೆ ಜಾಟ್ ರೆಜಿಮೆಂಟ್‌ನ ಕ್ಯಾಪ್ಟನ್ ಸೌರಭ್ ಕಾಲಿಯಾರನ್ನು ಕಳುಹಿಸಿತು 6 ಜನರ ತಂಡದೊಂದಿಗೆ 'ಭಜರಂಗ್' ಪೋಸ್ಟಿನತ್ತ ಹೊರಟರು, ಶತ್ರುಗಳಿರುವುದು ಖಾತ್ರಿಯಾಗಿ ತಂಡ ಕದನಕ್ಕಿಳಿಯಿತು. ಶತ್ರುಗಳ ಸಂಖ್ಯೆಯನ್ನು ಅಂದಾಜಿಸಲು ಎಡವಿದ್ದ ತಂಡ ಜಿಹಾದಿ ಸೈನಿಕರ ಬಂಧನದಲ್ಲಿ ಸೆರೆ ಸಿಕ್ಕಿ, ಚಿತ್ರವಿಚಿತ್ರವಾಗಿ ಅವರಿಂದ ಹಿಂಸೆಗೊಳಗಾಗಿ 22 ದಿನಗಳ ಸೆರೆಯ ನಂತರ ಕೊಲ್ಲಲ್ಪಟ್ಟರು.

ಮೇ 24ರಂದು ಇದು ವ್ಯವಸ್ಥಿತ ದಾಳಿ ಎಂದರಿತ ಸೇನೆ ಪ್ರಧಾನಿ, ರಕ್ಷಣಾ ಸಚಿವರು, ವಿದೇಶಾಂಗ ಸಚಿವರು, ಐಬಿ, ರಾಗಳು ಮತ್ತು ಮೂರೂ ಸೇನೆಯ ಮುಖ್ಯಸ್ಥರುಗಳನ್ನು ಸೇರಿಸಿ ಮಹತ್ವದ ಸಭೆ ನಡೆಸಿತು. ಭಾರತ ಸೇನೆಯ ಜನರಲ್ ಮಲಿಕ್ "ಸೇನೆಯ ಮೂರೂ ವಿಭಾಗಗಳು ಜೊತೆಗೂಡಿ ದಾಳಿಗೈದರೆ ಮಾತ್ರ ಪರಿಹಾರ. ಅನುಮತಿ ಕೊಡಿ" ಎಂದು ಪ್ರಧಾನಿಗೆ ತಾಕೀತು ಮಾಡಿದರು. ಅನುಮತಿ ದೊರೆತ ನಂತರ ಕೊನೆಯಲ್ಲಿ ಎದ್ದುನಿಂತು ನಿಶ್ಚಿತ ಗೆಲುವಿನ ಭರವಸೆಯಿಂದ ಇಡೀಯ ಹೋರಾಟವನ್ನು 'ಆಪರೇಷನ್ ವಿಜಯ್' ಎಂದು ಕರೆದರು.

ಇದೀಗ ಮೂರು ಯಶಸ್ವಿ ಯುದ್ಧಗಳ ನಂತರ ಭಾರತಕ್ಕೆ ಮತ್ತೊಂದು ಅಗ್ನಿ ಪರೀಕ್ಷೆ ಎದುರಾಗಿತ್ತು. ಸೌರಬ್ ಆದಿಯಾಗೆ ಅನೇಕ ತನ್ನದೇ ಸೈನಿಕರ ಮಾರಣಹೋಮಕ್ಕೆ ಪ್ರತೀಕಾರ ತೀರಿಸಿಕೊಳ್ಳಲು ಅವಕಾಶ ಒದಗಿತ್ತು. ಯುದ್ಧ ಬಹಳ ಜೋರಾಗಿಯೇ ಶುರುವಾಯಿತು, ದಾಳಿ-ಪ್ರತಿದಾಳಿಗಳು ನಡೆದವು. ವಿಮಾನಗಳ ವೇಗದ ಹಾರಾಟ, ಹೆಲಿಕಾಪ್ಟರ್‌ಗಳ ಭರ್ಜರಿ ಸದ್ದು, ಮದ್ದು-ಗುಂಡುಗಳ ಅಬ್ಬರದ ಸಿಡಿತ, ರಾಷ್ಟ್ರಕ್ಕಾಗಿ ಪ್ರಾಣಕೊಡುವ ಸೈನಿಕನ ತುಡಿತ ಎಲ್ಲವೂ ಜೋರಾಗಿಯೇ ಸಾಗಿತ್ತು. ಮೊದಮೊದಲು ಸ್ವಲ್ಪ ನಷ್ಟ ಅನುಭವಿಸಿದ ಭಾರತೀಯ ಸೇನೆ ಸಜ್ಜನರ ಸೋಗಿನ ವ್ಯಾಘ್ರ ಪಾಕಿಗಳನ್ನು ಬಗ್ಗುಬಡಿದು ತೋಲೋಲಿಂಗ್, ಟೈಗರ್ ಹಿಲ್, ಪಾಯಿಂಟ್ 5140, 4700, 5100, ಲೋನ್ ಹಿಲ್ ಮತ್ತು ಥ್ರೀ ಪಿಂಪಲ್‌ಗಳನ್ನು ಸೇರಿದಂತೆ ಹಲವಾರು ಪ್ರದೇಶಗಳನ್ನು ಜುಲೈ 15ರ ಹೊತ್ತಿಗೆ ಅವರ ಕಪಿಮುಷ್ಠಿಯಿಂದ ವಶಪಡಿಸಿಕೊಂಡಿತು. ಸುಮಾರು 527 ಯೋಧರ ಬಲಿದಾನದ ಬಳಿಕ 1999ರ ಜುಲೈ 26ಕ್ಕೆ ಕಾರ್ಯಾಚರಣೆ ನಿಲ್ಲಿಸಿ "ಆಪರೇಷನ್ ವಿಜಯ್"ನ ಸಂಭ್ರಮಾಚರಣೆಯಲ್ಲಿ ತೊಡಗಿತ್ತು. ಭಾರತ ತನ್ನ ಸಾಮರ್ಥ್ಯವನ್ನು ಜಗತ್ತಿಗೆ ಸಾಬೀತುಪಡಿಸಿತ್ತು. ಪಾಕಿಸ್ತಾನ ತೀವ್ರ ಮುಖಭಂಗಕ್ಕೆ ಒಳಗಾಯಿತಲ್ಲದೆ ಬೆನ್ನಿಗೆ ಚೂರಿಹಾಕುವ ರಾಷ್ಟ್ರ ಎಂದು ಜಗತ್ತಿಗೆ ತಿಳಿಯಿತು.



Capt. Amol Kalia Vr.C.

ಕ್ಯಾಪ್ಟನ್ ಸೌರಭ್ ಕಾಲಿಯಾ, ಕ್ಯಾಪ್ಟನ್ ವಿಕ್ರಂ ಬಾತ್ರಾ, ಗ್ರೇನೇಡಿಯರ್ ಯೋಗೇಂದರ್ ಸಿಂಗ್ ಯಾದವ್, ಕ್ಯಾಪ್ಟನ್ ಅಮೋಲ್ ಕಾಲಿಯಾ, ರಾಜೇಶ್ ಅಧಿಕಾರಿ, ಅಜಯ್ ಅಹುಜಾ, ಮೇಜರ್ ವಿವೇಕ್ ಗುಪ್ತಾ, ಕೆಂಗುರುಸೆ, ಲೆಫ್ಟಿನೆಂಟ್ ಮನೋಜ್ ಕುಮಾರ್ ಪಾಂಡೆ ಸೇರಿದಂತೆ ಸಾವಿರಾರು ತರುಣ ಯೋಧರ ಸಾಹಸ ಮತ್ತು ತ್ಯಾಗದ ಪ್ರತೀಕವಾಗಿ ಗೆಲುವು ಪ್ರಾಪ್ತವಾಯಿತು. ಸತ್ಯ, ಧರ್ಮ, ನಿಸ್ವಾರ್ಥ, ಕರ್ತವ್ಯ ಬದ್ಧತೆ, ತ್ಯಾಗ, ಶೌರ್ಯಗಳಲ್ಲಿ ಭಾರತೀಯ ಸೈನಿಕರಿಗೆ ಸರಿಸಮ ಮತ್ತಾರೂ ಇಲ್ಲ. ಆತ ಆಧ್ಯಾತ್ಮಿಕವಾಗಿ ಬೆಳೆದಿದ್ದಾನೆ. ಮಾನಸಿಕವಾಗಿ ಗಟ್ಟಿಯಾಗಿದ್ದಾನೆ. ದೈಹಿಕವಾಗಿ ಬಲಾಢ್ಯನೂ, ಚುರುಕೂ ಆಗಿದ್ದಾನೆ. ಸೂಕ್ತ ನಾಯಕನ ನೇತೃತ್ವದಲ್ಲಿ ಅವನು ಅದ್ಭುತವಾದ ಕೊಡುಗೆಗಳನ್ನು ಕೊಡಬಲ್ಲ! ಎಂಬುದು ಜಗತ್ತಿನೆದುರು ಮತ್ತೆ ಸಾಬೀತಾಯಿತು. ಅಂತಹ ಸಾವಿರ ಸಾವಿರ ಯೋಧರ ಬಲಿದಾನವನ್ನು ನಾವಿಂದು ಸ್ಮರಿಸಿಕೊಳ್ಳಬೇಕಿದೆ. ನಾವು ಈ ಬಲಿದಾನದ ಕಥನಗಳನ್ನು ಮರೆತದ್ದೇ ಆದರೆ ಅದು ರಾಷ್ಟ್ರಕ್ಕೆ ಮಾಡುವ ಮೋಸ ಎಂಬುದು ನನ್ನ ಅಭಿಪ್ರಾಯ.

'ಶಾಂತಿಯ ಹೊತ್ತಲ್ಲಿ ಮಗ ತಂದೆಯ ಶವಕ್ಕೆ ಅಂತ್ಯಸಂಸ್ಕಾರ ಮಾಡಿದರೆ, ಯುದ್ಧದ ಹೊತ್ತಲ್ಲಿ ತಂದೆಯೇ ಮಗನ ಚಿತೆಗೆ ಕೊಳ್ಳಿ ಇಡುತ್ತಾನೆ'. ಎಂದು ಕೇಳಿದ್ದೆ. ಕಾರ್ಗಿಲ್ ಯುದ್ಧ ಇಂತಹ ಅನೇಕ ಘಟನಾವಳಿಗಳಿಗೆ ಸಾಕ್ಷಿಯಾಯಿತು. ಅದು ಪಾಕಿಸ್ತಾನದಡೆಯಿಂದ ಅನಿರೀಕ್ಷಿತ ದಾಳಿ, ಆದರೆ ನಮ್ಮೆಡೆಯಿಂದ ನಿರೀಕ್ಷಿತ ಪ್ರತ್ಯುತ್ತರ. ಈ ಗೆಲುವಿನ ಶ್ರೇಯಸ್ಸೆಲ್ಲ ಹೋರಾಡಿದ, ಮಡಿದ ಭಾರತ ಮಾತೆಯ ಅಮರ ಪುತ್ರರಿಗೆ ಸಲ್ಲಬೇಕು. ರಾಷ್ಟ್ರಕ್ಕಾಗಿ ಸಾಯುವ ಅವಕಾಶ ಬಲು ಕಡಿಮೆ ಆದರೂ ಅದನ್ನು ಪಡೆದವ ಧನ್ಯ. ಅಂತಹ ಪುಣ್ಯಾತ್ಮರಾಗುವ ಅವಕಾಶವನ್ನು 'ಅಗ್ನಿಪಥ' ಮೂಲಕ ಭಾರತ ಸರ್ಕಾರ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಯಾರೆಲ್ಲಾ ಅರ್ಹರು ಈ ಅವಕಾಶಕ್ಕಾಗಿ ಕಾಯುತ್ತಿರುವಿರೊ, ಅವರೆಲ್ಲಾ ಇಂದೇ ನೋಂದಾಯಿಸಿಕೊಂಡು ಭರತ ಖಂಡದ ಭಾಗ್ಯವಾಗಿ. ರಾಷ್ಟ್ರಕ್ಕಾಗಿ ಬದುಕುವ ಅಥವಾ ಮಡಿಯುವ ಪುಟ್ಟ ಅವಕಾಶವನ್ನೂ ಕಳೆದುಕೊಳ್ಳದಿರಿ. ಇದುವೆ ನೀವು ಹುತಾತ್ಮರಿಗೆ ಕೊಡುವ ಬಹುದೊಡ್ಡ ಗೌರವ.

**– ಕಿರಣಕುಮಾರ ವಿವೇಕವಂಶಿ**

## ಸಂಸ್ಮರಣೆ

# ಜನರಲ್ ಕೆ.ಎಸ್. ತಿಮ್ಮಯ್ಯ (30ನೇ ಮಾರ್ಚ್, 1906 – 18ನೇ ಡಿಸೆಂಬರ್ 1965)



ಭಾರತದ ಸೈನ್ಯಕ್ಕೆ ಅಪ್ರತಿಮ ಧೀರರನ್ನು ಕೊಟ್ಟ ನಾಡು ನಮ್ಮ ಕರ್ನಾಟಕದ ಕೊಡಗು. ಈ ಮಹಾನ್ ಕೊಡುಗೆಯಲ್ಲಿ ಪ್ರಜ್ವಲಿಸಿದ ಪ್ರಮುಖ ತಾರೆಗಳಲ್ಲಿ ಜನರಲ್ ಕೊಡಂದೆರ ಸುಬ್ಬಯ್ಯ ತಿಮ್ಮಯ್ಯನವರೂ ಪ್ರಮುಖರು. ಜನರಲ್ ತಿಮ್ಮಯ್ಯನವರು 1957ರಿಂದ 1961ರವರೆಗೆ ಭಾರತದ ಭೂಸೇನಾ ದಂಡನಾಯಕರಾಗಿದ್ದರು. ಹಿಂದೆ ಕೊರಿಯಾ ದೇಶದ ಯುದ್ಧಾನಂತರ ಸಂಯುಕ್ತ ರಾಷ್ಟ್ರಗಳ ಒಂದು ದಳಕ್ಕೆ ಅಧಿಪತಿಯಾಗಿದ್ದ ತಿಮ್ಮಯ್ಯನವರು ಯುದ್ಧ ಖೈದಿಗಳ ಸ್ವದೇಶದಲ್ಲಿ, ಅವರುಗಳಿಗೆ ಪುನರ್ವಸತಿಯನ್ನು ಸ್ಥಾಪಿಸುವದರ ಹೊಣೆ ಹೊತ್ತಿದ್ದರು. ಭಾರತೀಯ ಸೇನೆಯಿಂದ ನಿವೃತ್ತರಾದ ಬಳಿಕ ಸಂಯುಕ್ತ ರಾಷ್ಟ್ರಗಳ ಶಾಂತಿ–ಸ್ಥಾಪಕ ಸೈನ್ಯದ ಮುಖ್ಯಸ್ಥರಾಗಿ ಸೈಪ್ರಸ್‌ನಲ್ಲಿದ್ದರು. ಹೀಗೆ ತಿಮ್ಮಯ್ಯನವರ ಸಾಧನೆಗಳು ವೈವಿಧ್ಯಪೂರ್ಣವಾದದ್ದು.

ಕೊಡಂದೆರ ಸುಬ್ಬಯ್ಯ ತಿಮ್ಮಯ್ಯನವರು 1906ರ ಮಾರ್ಚ್ 30ರಂದು ಮಡಿಕೇರಿಯಲ್ಲಿ ಜನಿಸಿದರು. ತಂದೆ ತಿಮ್ಮಯ್ಯ. ತಾಯಿ ಸೀತವ್ವ. ಉತ್ತಮ ಶಿಕ್ಷಣವನ್ನು ಕೊಡಿಸಬೇಕೆಂಬ ಉದ್ದೇಶದಿಂದ ಅವರ ಮಾತಾಪಿತರು ಅವರನ್ನು ಕೂನೂರಿನ ಸ್ಯೆಂಟ್ ಜೋಸೆಫ್'ಸ್ ಕಾನ್ವೆಂಟ್‌ನಲ್ಲಿ ಸೇರಿಸಿದರು. ಆಗ ಅವರ ವಯಸ್ಸು ಎಂಟು. ಈ ಶಾಲೆಯನ್ನು ಐರ್ಲೆಂಡಿನ ಇಬ್ಬರು ಸೋದರರು ನಡೆಸುತ್ತಿದ್ದರು. ಬಳಿಕ ಅವರು ಬೆಂಗಳೂರಿನ ಬಿಶಪ್ ಕಾಟನ್ ಬಾಲಕರ ಶಾಲೆಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಶಾಲಾ ವಿದ್ಯಾರ್ಜನೆಯ ನಂತರ ಈಗಿನ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜು ಎನಿಸಿರುವ ಡೆಹ್ರಾಡೂನಿನಲ್ಲಿರುವ 'ಪ್ರಿನ್ಸ್ ಆಫ್ ವೇಲ್ಸ್ ರಾಯಲ್ ಇಂಡಿಯನ್ ಮಿಲಿಟರಿ ಕಾಲೇಜ್'ನ್ನು ಸೇರಿದರು. ಈ ಕಾಲೇಜಿನಿಂದ ಪದವೀಧರರಾದ ಬಳಿಕ ಬ್ರಿಟನ್ನಿನ ರಾಯಲ್ ಮಿಲಿಟರಿ ಅಕಾಡೆಮಿ ಅಭ್ಯರ್ಥಿಗಳಾಗಿ ಆಯ್ಕೆಯಾದ ಕೇವಲ ಆರು ಮಂದಿ ಭಾರತೀಯರಲ್ಲಿ ಒಬ್ಬರಾಗಿ ತರಬೇತಿಯನ್ನು ಪಡೆದರು.

ಅಲ್ಲಿ ತರಬೇತಿ ಶಿಕ್ಷಣವನ್ನು ಮುಗಿಸಿ 1926ರಲ್ಲಿ ಬ್ರಿಟಿಶ್ ಇಂಡಿಯನ್ ಆರ್ಮಿಯಲ್ಲಿ ಕಮಿಶನ್ ಹುದ್ದೆಯನ್ನು ಪಡೆದು ನಂತರ ತಮ್ಮ ಸಾಮರ್ಥ್ಯದಿಂದ ಸೇನೆಯಲ್ಲಿ ಹಂತ ಹಂತವಾಗಿ ವಿವಿಧ ಭಡ್ತಿಗಳನ್ನು ಪಡೆಯುತ್ತಾ. 1928ರಲ್ಲಿ ಲೆಫ್ಟಿನಂಟ್ ಆಗಿದ್ದಲ್ಲದೇ, 1930ರಲ್ಲಿ ರೆಜಿಮೆಂಟಲ್ ಅಡ್ಜುಟಂಟ್ ಆಗಿ ನೇಮಕಗೊಂಡರು. ತಿಮ್ಮಯ್ಯನವರು ತಮ್ಮ ಯುದ್ಧ ಚಾತುರ್ಯವನ್ನು ವಾಯವ್ಯ ಗಡಿನಾಡಿನ (ಅಂದರೆ ಈಗಿನ ಪಾಕಿಸ್ತಾನದ) ರಣರಂಗದಲ್ಲಿ ನಡೆದ ಬಂಡುಕೋರ ಪಠಾಣ್ ಪಂಗಡಗಳ ವಿರುದ್ಧದ ಕದನದಲ್ಲಿ ಉತ್ತಮಪಡಿಸಿಕೊಂಡರು. ಫೆಬ್ರವರಿ 1935ರಲ್ಲಿ ಕ್ಯಾಪ್ಟನ್ ಆದರು. ಮರುವರ್ಷ ಚೆನ್ನೈಯಲ್ಲಿರುವ ಯೂನಿವರ್ಸಿಟಿ ಟ್ರೈನಿಂಗ್ ಕೋರ್‌ನಲ್ಲಿ ಅಡ್ಜುಟಂಟ್ ಆಗಿ ನೇಮಕಗೊಂಡು, ಭಾರತೀಯ ಸೈನ್ಯಕ್ಕೆ ಸೇವೆ ಸಲ್ಲಿಸುವ ನವ ತರುಣರಿಗೆ ಉತ್ತಮ ಸೈನಿಕನಾಗಿರ ಬೇಕಾದ ಜೀವಂತ ನಿದರ್ಶನಗಳನ್ನು ತಮ್ಮ ಅನುಭವದ ಮೂಲಕ ಬೋಧಿಸಿದರು.

ಎರಡನೇ ಮಹಾ ಯುದ್ಧದ ಸಮಯದಲ್ಲಿ ಸಿಂಗಪುರದಲ್ಲಿಯೂ ಕೆಲಕಾಲ ಸೇವೆ ಸಲ್ಲಿಸಿದ ನಂತರ 1941ರಲ್ಲಿ ಭಾರತಕ್ಕೆ ಹಿಂದಿರುಗಿ, ಆಗ್ರಾದ ಹೊಸ ಹೈದ್ರಾಬಾದ್ ರೆಜಿಮೆಂಟಲ್ ಸೆಂಟರ್‌ನಲ್ಲಿ ಸೆಕೆಂಡ್–ಇನ್–ಕಮಾಂಡರ್ ಆಗಿ ಭಡ್ತಿ ಪಡೆದರು. ಫೆಬ್ರವರಿ 1943ರಲ್ಲಿ ಮೇಜರ್ ಆಗಿ ಬಡ್ತಿ ಪಡೆದು ಅವರು 25ನೇ ಇಂಡಿಯನ್ ರೆಜಿಮೆಂಟಿನಲ್ಲಿ ಆ ಹುದ್ದೆಯನ್ನಲಂಕರಿಸಿದ ಪ್ರಥಮ ಅಧಿಕಾರಿಯಾದರು.

1935ರಲ್ಲಿ ತಿಮ್ಮಯ್ಯನವರು ನೈನಾ ಕಾರ್ಯಪ್ಪನವರನ್ನು ವಿವಾಹವಾದರು. ಆ ಸಮಯದಲ್ಲಿ ಈಗ ಪಾಕಿಸ್ಥಾನದ ಭಾಗವಾಗಿರುವ ಕ್ವೆಟ್ಟಾ ತಿಮ್ಮಯ್ಯನವರ ಕಾರ್ಯಕ್ಷೇತ್ರವಾಗಿತ್ತು. ಅದೇ ವರ್ಷ ಅಲ್ಲಿ ನಡೆದ ಭೂಕಂಪದ ಮರುದಿನಗಳಲ್ಲಿ ಈ ನವದಂಪತಿಗಳು ಮಾಡಿದ ಸೇವೆ ಸ್ಮರಣೀಯವೆನಿಸಿವೆ. ಬ್ರಿಟಿಷರ ಆಳ್ವಿಕೆಯಲ್ಲಿ ಲೆಫ್ಟಿನೆಂಟ್ ಗೌರವದೊಂದಿಗೆ ವಿವಿಧ ಹುದ್ದೆಗಳನ್ನು ನಿರ್ವಹಿಸಿದ ತಿಮ್ಮಯ್ಯನವರು ಹಲವಾರು ಕಾರ್ಯಾಚರಣೆಗಳಲ್ಲಿ ಪಾಲ್ಗೊಂಡಿದ್ದರು. ಇವುಗಳಲ್ಲಿ ಅಂದಿನ ಭಾರತದ ಭಾಗವಾಗಿದ್ದ ಪಾಕಿಸ್ಥಾನದ ಪ್ರದೇಶಗಳಲ್ಲಿ ಬಂಡುಕೋರ ಪಠಾಣ್ ಪಂಗಡಗಳ ವಿರುದ್ಧದ ಕಾರ್ಯಾಚರಣೆ ಪ್ರಮುಖವಾದದ್ದು. ಫೆಬ್ರವರಿ 1935ರಲ್ಲಿ ಅವರು ಕ್ಯಾಪ್ಟನ್ ಎನಿಸಿದ್ದರು. ಚೆನ್ನೈನಲ್ಲಿರುವ ಸೇನಾ ತರಬೇತಿ ಕೇಂದ್ರದಲ್ಲಿ ನವತರುಣರಿಗೆ ಬೋಧಕರಾಗಿಯೂ ಕೆಲಸ ಮಾಡಿದರು.

1947ರಲ್ಲಿ ಭಾರತವು ಸ್ವತಂತ್ರಗೊಳ್ಳುವ ಸನ್ನಾಹದಲ್ಲಿದ್ದುದರಿಂದ ತಿಮ್ಮಯ್ಯನವರನ್ನು ಫಿಲಿಪೈನ್ಸ್‌ನಿಂದ ವಾಪಸ್ ಕರೆದುಕೊಳ್ಳಲಾಯಿತು. ಭಾರತದ ವಿಭಜನೆಯ ಸಂದರ್ಭದಲ್ಲಿ ಪಾಕಿಸ್ತಾನದೊಂದಿಗೆ ಸೈನ್ಯದ ಮತ್ತು ಆಯುಧಗಳ ವಿಲೇವಾರಿಯನ್ನು ಕುರಿತು ರಚಿಸಿದ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಯಿತು. ಈ ಕರ್ತವ್ಯದ ಬಳಿಕ ಸೆಪ್ಟೆಂಬರ್ 1947ರಲ್ಲಿ ಅವರಿಗೆ ಮೇಜರ್–ಜನರಲ್ ಆಗಿ ಬಡ್ತಿ ನೀಡಲಾಯಿತು. 4ನೇ ಇನ್ಫೆಂಟ್ರಿ ವಿಭಾಗದ ದಳಪತಿಗಳಾಗಿ ಅವರಿಗೆ ಹೆಚ್ಚುವರಿ ಅಧಿಕಾರವಿತ್ತು, ಭಾರತ ಮತ್ತು ಪಾಕಿಸ್ತಾನಗಳ ನಡುವೆ ಪರಸ್ಪರ ವಲಸೆ ಹೋಗುವದನ್ನು ನಿಯಂತ್ರಿಸಲು ಪಂಜಾಬ್ ಗಡಿ ಸೇನೆಯ ಮುಖ್ಯಾಧಿಕಾರವನ್ನು ವಹಿಸಿಕೊಳ್ಳುವ ಆದೇಶ ನೀಡಲಾಯಿತು. ಮತೀಯ ಗಲಭೆಗಳಿಂದ ಹೊತ್ತಿ ಉರಿಯುತ್ತಿದ್ದ ಭಾರತ–ಪಾಕಿಸ್ತಾನದ ಗಡಿಯ ಸುತ್ತುಮುತ್ತಲ ಪ್ರದೇಶಗಳಲ್ಲಿ ಸುಮಾರು ಒಂದು ಕೋಟಿ ಜನರ ರಕ್ಷಣೆಯ ಭಾರ ಅವರ ಮೇಲಿತ್ತು. ಆ ರಣರಂಗದಲ್ಲಿ ಅವರ ವೈಯಕ್ತಿಕ ಪ್ರವೇಶದಿಂದ ಸಾವಿರಾರು ಮಂದಿ ಹಿಂದೂಗಳನ್ನೂ ಸಿಖ್ಖರನ್ನೂ ಕಾಪಾಡಿ ಅವರೆಲ್ಲರ ನೆಚ್ಚಿನ ನಾಯಕನೆನ್ನಿಸಿಕೊಂಡರು.

ಇದಾದ ನಂತರ ಜಮ್ಮು–ಕಾಶ್ಮೀರದಲ್ಲಿದ್ದ 19ನೇ ಇನ್ಫಂಟ್ರಿ ವಿಭಾಗದ ಆಧಿಪತ್ಯದಲ್ಲಿ ಅವರು ಕಾಶ್ಮೀರವನ್ನು ಆಕ್ರಮಿಸಲೆತ್ನಿಸುತ್ತಿದ್ದ ಪಾಕಿಸ್ತಾನದ ಸೇನೆಯನ್ನು ತಡೆಹಿಡಿದು ಹಿಮ್ಮೆಟ್ಟಿಸುವದರಲ್ಲಿ ಜಯಶೀಲರಾದರು. 1948ರ ನವೆಂಬರ್‌ನಲ್ಲಿ ತಾವೇ ಮುಂಚೂಣಿಯಲ್ಲಿದ್ದು 12000 ಅಡಿ ಎತ್ತರದಲ್ಲಿರುವ ಜೋಜಿಲಾ ಕಣಿವೆಯ ಮೇಲೆ ಹಠಾತ್ ದಾಳಿ ನಡೆಸಿ ಪಾಕಿಸ್ತಾನಿ ಸೈನ್ಯವನ್ನು ಅಲ್ಲಿಂದ ಕಾಲ್ತೆಗೆಯುವಂತೆ ಮಾಡಿ ದ್ರಾಸ್, ಕಾರ್ಗಿಲ್ ಮತ್ತು ಲೇಹ್ ಪ್ರದೇಶಗಳನ್ನು ಕೈವಶಮಾಡಿಕೊಂಡರು. 10000 ಅಡಿಗಿಂತಲೂ ಎತ್ತರದ ಪ್ರದೇಶದಲ್ಲಿ ಜಗತ್ತಿನ ಯಾವುದೇ ಸೈನ್ಯವು ಟ್ಯಾಂಕನ್ನು ಯುದ್ಧ ಕಾರ್ಯಾಚರಣೆಯಲ್ಲಿ ಬಳಸಿದುದು ಅದೇ ಪ್ರಪ್ರಥಮವೆಂದು ದಾಖಲಾಗಿದೆ. ತಿಮ್ಮಯ್ಯನವರು ಅಂದಿನ ಪ್ರಧಾನಿ ನೆಹ್ರೂರವರನ್ನು ಮೂರು ತಿಂಗಳ ಅವಧಿಯಿತ್ತರೆ ಅತಿಕ್ರಮಣಕಾರರನ್ನು ಮುಜಾಫರಬಾದ್‌ವರೆಗೆ ಅಟ್ಟುವುದಾಗಿ ಕೇಳಿಕೊಂಡರೂ, ಒಪ್ಪದೇ ಹೋಗಿ ಅಕಾಲಿಕ ಶಾಂತಿಸಂಧಾನ ಉಂಟಾದುದರಿಂದಾಗಿ ಕಾಶ್ಮೀರ ಸಮಸ್ಯೆಯನ್ನು ಇಂದಿನವರೆವಿಗೂ ಬಗೆಹರಿಸದೇ ಉಳಿಸಿರುವದು ಇತಿಹಾಸವೆನಿಸಿದೆ.

1953ರಲ್ಲಿ ಕೊರಿಯಾದಲ್ಲಿ ತಟಸ್ಥ ರಾಷ್ಟ್ರಗಳ ಸ್ವದೇಶ–ಪುನರ್ವಸತಿ ಸಮಿತಿಯ (Neutral Nations Repatriation Commission) ಸಭಾಧ್ಯಕ್ಷರನ್ನಾಗಿ ಸಂಯುಕ್ತ ರಾಷ್ಟ್ರಗಳು ಜನರಲ್ ಕೆ ಎಸ್ ತಿಮ್ಮಯ್ಯನವರನ್ನು ಆಯ್ಕೆ ಮಾಡಿದವು. ಕಮ್ಯುನಿಸ್ಟ್ ಮತ್ತು ಪಶ್ಚಿಮ ದೇಶಗಳೊಡನೆ ನಿಷ್ಪಕ್ಷಪಾತದಿಂದ ವ್ಯವಹರಿಸಿ ತಿಮ್ಮಯ್ಯನವರು ಎಲ್ಲರ ಮೆಚ್ಚುಗೆಯನ್ನು ಪಡೆದರು. ಈ ಸಂದರ್ಭದಲ್ಲಿ ಅವರಿಗೆ ಲೆಫ್ಟಿನಂಟ್–ಜನರಲ್ ಪದವಿಯನ್ನೀಯಲಾಯಿತು. ಭಾರತ ಸರಕಾರವು ಅವರನ್ನು ಪದ್ಮವಿಭೂಷಣವನ್ನಿತ್ತು ಗೌರವಿಸಿತು.

1957ರ ಮೇ 7ರಂದು ತಿಮ್ಮಯ್ಯನವರು ಭಾರತೀಯ ಭೂಸೈನ್ಯದ 6ನೇ ಮುಖ್ಯಸ್ಥರಾಗಿ ಅಧಿಕಾರವನ್ನು ವಹಿಸಿಕೊಂಡರು. 1959ರಲ್ಲೇ ಭಾರತ–ಚೀನಾ ಯುದ್ಧದ ಮುನ್ಸೂಚನೆಯಿದ್ದು, ಅದಕ್ಕೆ ಭಾರತೀಯ ಸೈನ್ಯವನ್ನು ಸಜ್ಜುಗೊಳಿಸಬೇಕೆಂಬ ತಿಮ್ಮಯ್ಯನವರ ಸಲಹೆಯನ್ನು ಆಗಿನ ರಕ್ಷಣಾ ಮಂತ್ರಿ ವಿ ಕೆ ಕೃಷ್ಣ ಮೆನೊನ್ ತಳ್ಳಿಹಾಕಿದ್ದರಿಂದ ಅದನ್ನು ಪ್ರತಿಭಟಿಸಿ ತಿಮ್ಮಯ್ಯನವರು ತಮ್ಮ ರಾಜೀನಾಮೆಯನ್ನು ಪ್ರಧಾನಿಗಿತ್ತರು. ನೆಹರೂ ಅವರು ತಿಮ್ಮಯ್ಯನವರ ಮನವೊಲಿಸಿ ರಾಜೀನಾಮೆಯನ್ನು ಹಿಂತೆಗೆಕೊಳ್ಳುವಂತೆ ಮಾಡಿದರು. ಆದರೆ ಅವರ ಸಲಹೆ–ಸೂಚನೆಗಳನ್ನು ಕಾರ್ಯಗತ ಮಾಡಲು ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಹಿಂದಿ ಚೀನೀ ಬಾಯಿ ಬಾಯಿ ಎನ್ನುವ ಜಪದಲ್ಲೇ ಇದ್ದಾಗ ಚೀನಾ ಏಕಾಏಕಿ ಭಾರತದ ಮೇಲೆ ಅಕ್ರಮಣ ಮಾಡಿ ಸಾವಿರಾರು ಚದುರ ಅಡಿಗಳಷ್ಟು ಭೂಭಾಗವನ್ನು ಕಬಳಿಸಿದ್ದು ಈಗ ಇತಿಹಾಸ. 1961ರ ಮೇ 7ರಂದು ತಿಮ್ಮಯ್ಯನವರು ನಿವೃತ್ತರಾದರು. 35ವರ್ಷಗಳ ಅವರ ಸೈನ್ಯದ ಸೇವೆ ಅಲ್ಲಿಗೆ ಮುಗಿಯಿತು.

ಭಾರತೀಯ ಸೈನ್ಯದಿಂದ ನಿವೃತ್ತರಾದ ಮೇಲೆ, ಸಂಯುಕ್ತ ರಾಷ್ಟ್ರಗಳು ಅವರ ಸೇವೆಯನ್ನು ಬಯಸಿ ಸೈಪ್ರಸ್‌ನಲ್ಲಿ ಸಂಯುಕ್ತ ರಾಷ್ಟ್ರಗಳ ಸೇನೆಯ ಆಧಿಪತ್ಯವನ್ನು ಜುಲೈ 1964ರಲ್ಲಿ ನೀಡಿತು. ಅಲ್ಲಿನ ಅತ್ಯಂತ ವಿಸ್ಫೋಟಕ ಪರಿಸ್ಥಿತಿಯನ್ನು ಸೂಕ್ತವಾಗಿ ಬಗೆಹರಿಸಿದ್ದಕ್ಕೆ ತುರ್ಕಿಯ ವಿದೇಶಾಂಗ ಸಚಿವರು, 'ಅವರ ಬೌದ್ಧಿಕ ಪ್ರಾಮಾಣಿಕತೆ ಮತ್ತು ಅಚಲ ನಿಷ್ಪಕ್ಷಪಾತದಿಂದ ಶಾಂತಿಯನ್ನು ಸ್ಥಾಪಿಸಿದ ಶ್ರೇಷ್ಠ ಪ್ರಯತ್ನ'ವನ್ನು ಹೃತ್ಪೂರ್ವಕವಾಗಿ ಶ್ಲಾಘಿಸಿದ್ದರು. ಗ್ರೀಕ್ ಸರ್ಕಾರವು ಅವರ 'ಚಾರಿತ್ರ್ಯ ಬಲ, ವಾಸ್ತವವಾದಿತ್ವ ಮತ್ತು ನ್ಯಾಯಪ್ರಜ್ಞೆ'ಯನ್ನು ಕೊಂಡಾಡಿ ಗೌರವಿಸಿತ್ತು.

## ಎಲ್ಲೋ ಕೇಳಿದ ಕಥೆ

ಹದಿನೆಂಟು ದಿನಗಳ ಮಹಾಭಾರತ ಯುದ್ಧವೆಲ್ಲ ಮುಗಿದ ಮೇಲೆ ಕೊನೆಯಲ್ಲಿ ಸಂಜಯನು ಜಗತ್ತಿನ ಆ ಮಹಾಯುದ್ಧ ನಡೆದ ಯುದ್ಧಭೂಮಿಯ ಸ್ಥಳಕ್ಕೆ ಹೋದನು.

ಅವನು ಅಲ್ಲಿ ನಿಂತು ಸುತ್ತ ಮುತ್ತಲೂ ನೋಡಿದನು ಮತ್ತು ಯುದ್ಧವು ನಿಜವಾಗಿಯೂ ಇಲ್ಲೇ ನಡೆಯಿತೇ ಎಂದು ಆಶ್ಚರ್ಯಪಟ್ಟನು. ಇಲ್ಲಿ ಯುದ್ಧವು ನಡೆದಿದ್ದರೆ ಅವನು ನಿಂತಿರುವ ಆ ಭೂಮಿಯು ರಕ್ತದಲ್ಲಿ ಮುಳುಗಿರಬೇಕಿತ್ತು. ಆ ಮಹಾನ್ ಪಾಂಡವರು ಮತ್ತು ಕೃಷ್ಣರು ಈ ಜಾಗದಲ್ಲಿ ನಿಂತಿದ್ದರೇ? ಎಂದು ಯೋಚಿಸಿದ.

ಅಷ್ಟರಲ್ಲಿ ಒಬ್ಬ ವೃದ್ಧನು ಅಲ್ಲಿಗೆ ಬಂದು ನಿಧಾನವಾದ ಮತ್ತು ಶಾಂತವಾದ ಧ್ವನಿಯಲ್ಲಿ ಹೇಳಿದ, "ಅದರ ಬಗ್ಗೆ ನಿಮಗೆ ಎಂದಿಗೂ ಸತ್ಯ ತಿಳಿಯುವುದಿಲ್ಲ!"

ದೊಡ್ಡ ಧೂಳಿನ ಆ ಮೋಡದ ನಡುವೆ ಕೇಸರಿ ವಸ್ತ್ರವನ್ನು ಧರಿಸಿದ ವೃದ್ಧನನ್ನು ನೋಡಿದ ಸಂಜಯನು ತನ್ನ ತಲೆಯನ್ನು ಅವನತ್ತ ತಿರುಗಿಸಿದನು.

"ನೀವು ಕುರುಕ್ಷೇತ್ರ ಯುದ್ಧದ ಬಗ್ಗೆ ತಿಳಿದುಕೊಳ್ಳಲು ಬಂದಿದ್ದೀರಿ ಎಂದು ನನಗೆ ತಿಳಿದಿದೆ, ಆದರೆ ನಿಜವಾದ ಯುದ್ಧ ಯಾವುದು? ಎಂದು ನೀವು ತಿಳಿಯುವವರೆಗೂ ಆ ಯುದ್ಧದ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಿಲ್ಲ" ಎಂದು ಆ ವೃದ್ಧನು ನಿಗೂಢವಾಗಿ ಹೇಳಿದ.

ಆಗ ಸಂಜಯನು, "ಮಹಾಭಾರತದ ಅರ್ಥ ಏನು ಗೊತ್ತು ನಿಮಗೆ?" ಆ ವೃದ್ಧನನ್ನು ಕೇಳಿದ.

ವೃದ್ಧ ಹೇಳಲು ಪ್ರಾರಂಭಿಸಿದ, "ಮಹಾಭಾರತವು ಒಂದು ಮಹಾಕಾವ್ಯ, ಒಂದು ಕಥೆ, ಒಂದು ವಾಸ್ತವ, ಆದರೆ ಖಂಡಿತವಾಗಿಯೂ ಅದು ಒಂದು ತತ್ವಶಾಸ್ತ್ರ."

ವೃದ್ಧನು ಸಂಜಯ್‌ನನ್ನು ನೋಡಿ ಮುಗುಳ್ನಗುತ್ತಿದ್ದನು.

"ಈಗಲ್ಲಿ ತತ್ವಶಾಸ್ತ್ರ ಏನು ಎಂದು ನಿಮಗೆ ಗೊತ್ತಾ? ನೀವು ನನಗೆ ದಯವಿಟ್ಟು ಹೇಳುವಿರಾ?" ಎಂದು ಸಂಜಯನು ವೃದ್ಧನನ್ನು ವಿನಂತಿಸಿದ.

ಖಂಡಿತವಾಗಿ ನನಗೆ ಗೊತ್ತು ಎಂದ ಆ ವೃದ್ಧನು ಹೇಳಲು ಪ್ರಾರಂಭಿಸಿದ,

ಆ ಪಂಚ ಪಾಂಡವರು ಎಂದರೆ ನಿಮ್ಮ ಪಂಚೇಂದ್ರಿಯಗಳಲ್ಲದೆ ಬೇರೇನೂ ಅಲ್ಲ – ದೃಷ್ಟಿ, ವಾಸನೆ, ರುಚಿ, ಸ್ಪರ್ಶ ಮತ್ತು ಶ್ರವಣ ಎಂದು ಹೇಳಿ, ತನ್ನ ಕಣ್ಣುಗಳನ್ನು ಕಿರಿದು ಮಾಡಿಕೊಂಡು ನಿಮಗೆ ಕೌರವರು ಎಂದರೆ ಏನು ಎಂದು ನಿಮಗೆ ತಿಳಿದಿದೆಯೇ? ಎಂದು ಸಂಜಯನನ್ನೇ ಕೇಳಿದ.

ಸಂಜಯ ತಲೆ ಅಲ್ಲಾಡಿಸಿದ.

ಕೌರವರು ಎಂದರೆ ನೂರಾರು ತರಹದ ದುರ್ಗುಣಗಳು, ವಿಕಾರಗಳು. ಇವು ಪ್ರತಿದಿನ ನಿಮ್ಮ ಇಂದ್ರಿಯಗಳ ಮೇಲೆ ದಾಳಿ ಮಾಡುತ್ತವೆ, ಆದರೆ ನೀವು ಧೈರ್ಯಮಾಡಿ ಅವುಗಳೊಂದಿಗೆ ಹೋರಾಡಬಹುದು ಮತ್ತು ನೀವೂ ಸಹ ದುರ್ಗುಣ, ವಿಕಾರಗಳಿಂದ ಗೆಲ್ಲಬಹುದು. ಆದರೆ ಹೇಗೆ ಎಂದು ನಿಮಗೆ ತಿಳಿದಿದೆಯೇ?

ಸಂಜಯನು ಮತ್ತೆ ತಲೆ ಅಲ್ಲಾಡಿಸಿದ.

ಯಾವಾಗ ಶ್ರೀಕೃಷ್ಣನು ನಿಮ್ಮ ಮನೋರಥವನ್ನು ಏರುತ್ತಾನೋ ಆಗ ನೀವು ಆ ದುರ್ಗುಣಗಳನ್ನು, ವಿಕಾರಗಳನ್ನು (ಕೌರವರನ್ನು) ಗೆಲ್ಲಬಹುದು!" ಎಂದು ಹೇಳುತ್ತಾ ವೃದ್ಧನು ಪ್ರೀತಿಯಿಂದ ಮುಗುಳ್ನಕ್ಕನು ಮತ್ತು ಸಂಜಯನು ತನ್ನ ಅಂತರ್ದೃಷ್ಟಿಯನ್ನು ತೆರೆದಾಗ ತನಗೆ ಯೋಚಿಸಲು ದೊರೆತ ಹೊಸ ವಿಷಯದ ಬಗ್ಗೆಯೇ ಯೋಚಿಸಲು ಪ್ರಾರಂಭಿಸಿದನು.

ಶ್ರೀಕೃಷ್ಣನು ನಿಮ್ಮ ಆಂತರಿಕ ಧ್ವನಿ, ಶ್ರೀಕೃಷ್ಣನು ನಿಮ್ಮ ಆತ್ಮ, ಶ್ರೀಕೃಷ್ಣನು ನಿಮ್ಮ ಮಾರ್ಗದರ್ಶಕ ಬೆಳಕು ಮತ್ತು ನೀವು ನಿಮ್ಮ ಜೀವನವನ್ನು ಅವನ ಕೈಯಲ್ಲಿ ಒಪ್ಪಿಸಿದರೆ ನೀವು ಮತ್ತೆ ಚಿಂತಿಸಬೇಕಾಗಿಲ್ಲ." ಎಂದು ಆ ವೃದ್ಧ ಹೇಳಿದ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ





## ಸಾಲುದ್ದದ ಸುದ್ದಿಗಳು

### ಮೊದಲ ಬಾರಿಗೆ ಮಂಗಳೂರು ಬಂದರಿಗೆ ಮೈನ್‌ಲೈನ್ ಕಂಟೈನರ್ ಹಡಗು



ನವ ಮಂಗಳೂರು ಬಂದರು ಪ್ರಾಧಿಕಾರವು ಮತ್ತೊಂದು ಮೈಲಿಗಲ್ಲನ್ನು ಸಾಧಿಸಿದ್ದು, ಮೊದಲ ಮೈನ್‌ಲೈನ್ ಕಂಟೈನರ್ ಹಡಗು MSC ಎರ್ಮಿನಿಯಾವನ್ನು ಸ್ವಾಗತಿಸಿದೆ. 276.5 ಮೀಟರ್ ಉದ್ದವಿರುವ ಎಂಎಸ್‌ಸಿ ಎರ್ಮಿನಿಯಾ ಹಡಗು ವಿಶ್ವದ ಅತಿದೊಡ್ಡ ಕಂಟೈನರ್ ಹಡಗುಗಳಲ್ಲಿ ಒಂದಾಗಿದೆ ಮತ್ತು ಭಾನುವಾರ ಇದು ನವ ಮಂಗಳೂರಿಗೆ ಆಗಮಿಸುವ ಮೂಲಕ ಹೊಸತನಕ್ಕೆ ನಾಂದಿ ಹಾಡಿದೆ. ಹಡಗಿನ ಉದ್ದ 276.5 ಮೀಟರ್ ಮತ್ತು ಡ್ರಾಫ್ಟ್ 12.8 ಮೀಟರ್.

ಹಡಗು 1,771 ಟಿಐಯು (ಟ್ವೆಂಟಿ ಫೂಟ್ ಇಕ್ವೆಲೆಂಟ್ ಯೂನಿಟ್) ಹಾಗೂ 1,265 ಪ್ರಮುಖ ಕಂಟೈನರ್‌ಗಳನ್ನು ಸಾಗಿಸುವ ಸಾಮರ್ಥ್ಯ ಹೊಂದಿದೆ. ಮಂಗಳೂರಿಗೆ ಬಂದ ಈ ಹಡಗನ್ನು ಜಲಫಿರಂಗಿ ಮೂಲಕ ಸ್ವಾಗತಿಸಲಾಯಿತು. ಭಾನುವಾರ ಸಂಜೆ ಆಗಮಿಸಿದ ಈ ಹಡಗು ಸರಕುಗಳನ್ನು ಹೊತ್ತು ಇಂದು ನಿರ್ಗಮಿಸುವ ಸಾಧ್ಯತೆಯಿದೆ.

ಬಂದರಿಗೆ ಮೈನ್‌ಲೈನ್ ಕಂಟೈನರ್ ಸಾಗಣೆಯ ಹಡಗು ಆಗಮಿಸಬೇಕಾದರೆ ಅದಕ್ಕೆ ಬೇಕಾಗುವಷ್ಟು ಕಂಟೈನರ್ ಸರಕುಗಳು ಇರುವುದು ಅವಶ್ಯಕ. ಇಲ್ಲದಿದ್ದರೆ ಮಧ್ಯಮ ಗಾತ್ರದ ಹಡಗುಗಳಲ್ಲೇ ಸರಕುಗಳನ್ನು ತುಂಬಿಸಿ ಇತರ ಬಂದರಿಗೆ ಕೊಂಡೊಯ್ದು, ನಂತರ ಅಲ್ಲಿ ಮೈನ್‌ಲೈನ್ ಕಂಟೈನರ್ ಹಡಗಿಗೆ ತುಂಬಬೇಕಾಗುತ್ತದೆ. ಪ್ರಸ್ತುತ ಅವಶ್ಯವಿರುವಷ್ಟು ಸರಕು ನವಮಂಗಳೂರು ಬಂದರಿನಲ್ಲಿ ಇರುವುದರಿಂದ ಮೈನ್‌ಲೈನ್ ಕಂಟೈನರ್ ಹಡಗು ಇಲ್ಲಿಗೆ ಆಗಮಿಸಿದೆ.

### 2021–22ರಲ್ಲಿ ಕುಸಿತ ಕಂಡ ಬ್ಯಾಂಕಿಂಗ್ ವಂಚನೆ





ಬ್ಯಾಂಕಿಂಗ್ ವಲಯವು 2021–22ರಲ್ಲಿ ಕಡಿಮೆ ವಂಚನೆ ಪ್ರಕರಣಗಳನ್ನು ದಾಖಲಿಸಿದೆ. ವಂಚನೆ ಪ್ರಕರಣಗಳಲ್ಲಿ ರೂ. 100 ಕೋಟಿಗೂ ಅಧಿಕ ಇಳಿಕೆ ಕಂಡು ಬಂದಿದೆ ಎಂದು ವರದಿಗಳು ತಿಳಿಸಿವೆ. ಅಧಿಕೃತ ಮಾಹಿತಿಯ ಪ್ರಕಾರ, ಖಾಸಗಿ ಮತ್ತು ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿನ ವಂಚನೆ ಪ್ರಕರಣಗಳ ಸಂಖ್ಯೆ 2020–21ರಲ್ಲಿ 265 ರಿಂದ 2021–22ರಲ್ಲಿ 118ಕ್ಕೆ ಇಳಿದಿದೆ.

ಸಾರ್ವಜನಿಕ ವಲಯದ ಬ್ಯಾಂಕ್‌ಗಳ (PSB) ವಿಷಯದಲ್ಲಿ, 2021ರ ಹಣಕಾಸು ವರ್ಷದಲ್ಲಿ ರೂ 100 ಕೋಟಿಗೂ ಅಧಿಕ ವಂಚನೆ ಪ್ರಕರಣಗಳ ಒಟ್ಟು ಸಂಖ್ಯೆ 167 ರಿಂದ 80ಕ್ಕೆ ಇಳಿದಿದೆ. ಖಾಸಗಿ ವಲಯದಲ್ಲಿ 2021–22ರ ಹಣಕಾಸು ವರ್ಷದಲ್ಲಿ ಅಂತಹ ಪ್ರಕರಣಗಳು 98 ರಿಂದ 38ಕ್ಕೆ ಇಳಿದಿದೆ.

ಒಟ್ಟು ಮೊತ್ತಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಗೆ ಹಣಕಾಸು ವರ್ಷ 2020–21ರಲ್ಲಿ ವಂಚನೆ ರೂ 65,900 ಕೋಟಿಯಿಂದ ರೂ. 28,000 ಕೋಟಿಗೆ ಇಳಿದಿದೆ. ಖಾಸಗಿ ವಲಯದ ಬ್ಯಾಂಕ್‌ಗಳಿಗೆ ಹಣಕಾಸು ವರ್ಷ 2021–2022ರಲ್ಲಿ ರೂ. 39,900 ಕೋಟಿಯಿಂದ ರೂ. 13,000 ಕೋಟಿಗೆ ಇಳಿಕೆಯಾಗಿದೆ.

### ಸ್ಟಾರ್ಟ್‌ಅಪ್ ರ್‍ಯಾಂಕಿಂಗ್ 2021: ಕರ್ನಾಟಕ ಅತ್ಯುತ್ತಮ ಸಾಧಕ




ಕೇಂದ್ರ ಸರ್ಕಾರವು ನಿನ್ನೆ ಸ್ಟಾರ್ಟ್ ಅಪ್ ರ್‍ಯಾಂಕಿಂಗ್ ಪಟ್ಟಿ–2021 ಅನ್ನು ಬಿಡುಗಡೆ ಮಾಡಿದ್ದು, ಕರ್ನಾಟಕ ಅತ್ಯುತ್ತಮ ಸಾಧಕನಾಗಿ ಹೊರಹೊಮ್ಮಿದೆ. ಗುಜರಾತ್ ಮತ್ತು ಮೇಘಾಲಯಕ್ಕೂ ಈ ಹೆಗ್ಗಳಿಕೆ ದೊರೆತಿದೆ. ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಗೆ ಪೂರಕವಾದ ವಾತಾವರಣ ನಿರ್ಮಿಸಿದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪಟ್ಟಿಯನ್ನು ಈ ರ್‍ಯಾಂಕಿಂಗ್ ಒಳಗೊಂಡಿದೆ.

ಅತ್ಯುತ್ತಮ ಸಾಧಕ, ಅತ್ಯುತ್ತಮ ಕಾರ್ಯನಿರ್ವಾಹಕ, ಅತ್ಯುತ್ತಮ ನಾಯಕ, ಭರವಸೆಯ ನಾಯಕ, ಅತ್ಯುತ್ತಮ ಉದಯೋನ್ಮುಖ ನಾಯಕ– ಹೀಗೆ ಐದು ವಿಭಾಗಗಳಲ್ಲಿ ರಾಜ್ಯಗಳನ್ನು ವಿಂಗಡಿಸಿ ಶ್ರೇಯಾಂಕವನ್ನು ನೀಡಲಾಗಿದೆ. ಇದರಲ್ಲಿ ಅತ್ಯುತ್ತಮ ಸಾಧಕ ಕೆಟಗರಿಯಲ್ಲಿ ಕರ್ನಾಟಕ ಅಗ್ರ ಸಾಧಕನಾಗಿ ಹೊರಹೊಮ್ಮಿದೆ.

ಸ್ಟಾರ್ಟ್‌ಅಪ್ ಅತ್ಯುತ್ತಮ ಕಾರ್ಯನಿರ್ವಾಹಕ ಕೆಟಗರಿಯಲ್ಲಿ ತೆಲಂಗಾಣ, ಕೇರಳ, ಮಹಾರಾಷ್ಟ್ರ, ಒಡಿಶಾ, ಜಮ್ಮು ಮತ್ತು ಕಾಶ್ಮೀರ ಇದೆ. ಸ್ಟಾರ್ಟ್–ಅಪ್ ಅತ್ಯುತ್ತಮ ನಾಯಕ ಕೆಟಗರಿಯಲ್ಲಿ ತಮಿಳುನಾಡು, ಉತ್ತರಾಖಂಡ, ಉತ್ತರಪ್ರದೇಶ, ಪಂಜಾಬ್, ಅಸ್ಸಾಂ, ಅರುಣಾಚಲ ಪ್ರದೇಶ, ಅಂಡಮಾನ್ ಮತ್ತು ನಿಕೋಬಾರ್, ಗೋವಾ ಇದೆ.

### ಮಲೇಷ್ಯಾದ ಅಗ್ರ ಆಯ್ಕೆಯಾಗಿ ಹೊರಹೊಮ್ಮಿದ ತೇಜಸ್ ಯುದ್ಧವಿಮಾನ

ಭಾರತದ ತೇಜಸ್ ಲಘು ಯುದ್ಧ ವಿಮಾನವು ಮಲೇಷ್ಯಾದ ಅಗ್ರ ಆಯ್ಕೆಯಾಗಿ ಹೊರಹೊಮ್ಮಿದೆ. ಮಲೇಷ್ಯಾವು ತನ್ನ ವಯಸ್ಸಾದ ಯುದ್ಧ ವಿಮಾನಗಳ ಫ್ಲೀಟ್ ಅನ್ನು ಬದಲಿಸಲು ಮುಂದಾಗಿದ್ದು, ಇದಕ್ಕಾಗಿ ತೇಜಸ್‌ನತ್ತ ನೋಡುತ್ತಿದೆ. ಉಭಯ ದೇಶಗಳು ಖರೀದಿ ಒಪ್ಪಂದವನ್ನು ದೃಢೀಕರಿಸಲು ಮಾತುಕತೆಗಳನ್ನು ನಡೆಸುತ್ತಿವೆ ಎಂದು ಮೂಲಗಳು ತಿಳಿಸಿವೆ.



ಚೀನಾದ ಜೆಎಫ್–17 ಜೆಟ್, ದಕ್ಷಿಣ ಕೊರಿಯಾದ ಎಫ್‌ಎ–50 ಮತ್ತು ರಷ್ಯಾದ ಮಿಗ್–35 ಹಾಗೂ ಯಾಕ್–130 ವಿಮಾನಗಳ ತೀವ್ರ ಪೈಪೋಟಿಯ ನಡುವೆಯೂ ಮಲೇಷ್ಯಾ ಭಾರತೀಯ ವಿಮಾನಗಳನ್ನು ಆಯ್ಕೆ ಮಾಡಿದೆ ಎಂದು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಆರ್ ಮಾಧವನ್ ತಿಳಿಸಿದ್ದಾರೆ.

ಪ್ಯಾಕೇಜ್ ಭಾಗವಾಗಿ, ಭಾರತವು ತನ್ನ ರಷ್ಯಾ ಮೂಲದ Su–30 ಫೈಟರ್ ಫ್ಲೀಟ್‌ಗಾಗಿ ಮಲೇಷ್ಯಾದಲ್ಲಿ MRO (ನಿರ್ವಹಣೆ, ದುರಸ್ತಿ ಮತ್ತು ಕೂಲಂಕುಷ) ಸೌಲಭ್ಯವನ್ನು ಸ್ಥಾಪಿಸಲು ಮುಂದಾಗಿದೆ. ಪಾಶ್ಚಿಮಾತ್ಯ ನಿರ್ಬಂಧಗಳ ಕಾರಣ ರಷ್ಯಾದಿಂದ ವಿಮಾನಗಳಿಗೆ ಬಿಡಿಭಾಗಗಳನ್ನು ಸಂಗ್ರಹಿಸುವಲ್ಲಿ ತೊಂದರೆಗಳನ್ನು ಎದುರಿಸುತ್ತಿರುವ ಕಾರಣ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.ಒಪ್ಪಂದ ಶೀಘ್ರವೇ ಅಂತಿಮಗೊಳ್ಳುವ ನಿರೀಕ್ಷೆ ಇದೆ ಎಂದು ಮಾಧವನ್ ಹೇಳಿದ್ದಾರೆ.

"ಮಾತುಕತೆ ಬಹುತೇಕ ಅಂತಿಮ ಹಂತದಲ್ಲಿದೆ. ರಷ್ಯಾವನ್ನು ಹೊರತುಪಡಿಸಿ ಅವರ Su–30 ವಿಮಾನಗಳಿಗೆ ಬೆಂಬಲವನ್ನು ನೀಡುತ್ತಿರುವ ಏಕೈಕ ದೇಶ ನಮ್ಮದು, ಸುಖೋಯ್ ಫ್ಲೀಟ್‌ಗೆ ಅಗತ್ಯವಿರುವ ಮಟ್ಟಿಗೆ ಅವರನ್ನು ಬೆಂಬಲಿಸಲು ನಾವು ಮಾತ್ರ ಸಾಧ್ಯ" ಎಂದು ಮಾಧವನ್ ಹೇಳಿದ್ದಾರೆ.

### ಜೂನ್‌ನಲ್ಲಿ 125 ಮಿಲಿಯನ್ ಟನ್ ಸರಕು ಸಾಗಿಸಿದೆ ರೈಲ್ವೇ

ರೈಲ್ವೇ ಈ ವರ್ಷದ ಜೂನ್‌ನಲ್ಲಿ 125 ಮಿಲಿಯನ್ ಟನ್‌ಗಳಿಗಿಂತಲೂ ಹೆಚ್ಚು ಮಾಸಿಕ ಸರಕು ಸಾಗಣೆಯನ್ನು ದಾಖಲಿಸಿದೆ. 2021ರ ಇದೇ ಅವಧಿಗೆ ಹೋಲಿಸಿದರೆ ಲೋಡಿಂಗ್ ಶೇಕಡಾ 11.28 ರಷ್ಟು ಬೆಳವಣಿಗೆಯನ್ನು ಕಂಡಿದೆ. ಬೆಳವಣಿಗೆಯು 13 ಮಿಲಿಯನ್ ಟನ್‌ಗಳಷ್ಟು ಹೆಚ್ಚಿದ ಕಲ್ಲಿದ್ದಲು ಲೋಡಿಂಗ್‌ನಿಂದ ಉತ್ತೇಜಿತವಾಗಿದೆ, ನಂತರ ಸಿಮೆಂಟ್ ಮತ್ತು ಆಹಾರ ಧಾನ್ಯಗಳ ಹೆಚ್ಚಿನ ಲೋಡಿಂಗ್‌ನಿಂದ ಉತ್ತೇಜಿತವಾಗಿದೆ.



2021–22 ರಲ್ಲಿ ಸಾಧಿಸಿದ 339 ಮಿಲಿಯನ್ ಟನ್‌ಗಳಿಗೆ ಹೋಲಿಸಿದರೆ ಈ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ 339 ಮಿಲಿಯನ್ ಟನ್‌ಗಳಷ್ಟು ಒಟ್ಟು ಸರಕು ಸಾಗಣೆ ಲೋಡ್ ಆಗಿದೆ.

### ರಾಜ್ಯಾದ್ಯಂತ 438 'ನಮ್ಮ ಕ್ಲಿನಿಕ್' ಸ್ಥಾಪಿಸಲಿದೆ ರಾಜ್ಯ ಸರ್ಕಾರ


ರಾಜ್ಯಾದ್ಯಂತ 'ನಮ್ಮ ಕ್ಲಿನಿಕ್' ಎಂಬ 438 ನಗರ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳ (ಯು–ಎಚ್‌ಡಬ್ಲ್ಯುಸಿ) ಸ್ಥಾಪನೆಗೆ ಮತ್ತು ಅವುಗಳ ಕಾರ್ಯನಿರ್ವಹಣೆಗಾಗಿ ವೈದ್ಯರು, ದಾದಿಯರು ಮತ್ತು ಸಿಬ್ಬಂದಿಯನ್ನು ನೇಮಿಸಲು ಕರ್ನಾಟಕ ಸಚಿವ ಸಂಪುಟವು ಶುಕ್ರವಾರ 103.73 ಕೋಟಿ ರೂ.ಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಲು ಮತ್ತು ಅಸ್ತಿತ್ವದಲ್ಲಿರುವ ಆಸ್ಪತ್ರೆಗಳ ಹೊರೆ ಕಡಿಮೆ ಮಾಡಲು 'ನಮ್ಮ ಕ್ಲಿನಿಕ್'ಗಳನ್ನು ಸ್ಥಾಪಿಸಲಾಗುತ್ತಿದೆ. "15ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ನಾವು ಬಜೆಟ್‌ನಲ್ಲಿ ಘೋಷಿಸಿದ್ದ ನಮ್ಮ ಕ್ಲಿನಿಕ್ ಎಂಬ 438 ನಗರ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳನ್ನು ಕರ್ನಾಟಕದಲ್ಲಿ ಪ್ರಾರಂಭಿಸಲು ನಾವು ಅನುಮತಿ ನೀಡಿದ್ದೇವೆ. ಅದರಂತೆ 438 ವೈದ್ಯರು, ಇಷ್ಟೇ ಸಂಖ್ಯೆಯ ನರ್ಸ್‌ಗಳು ಮತ್ತು ಎರಡನೇ ವಿಭಾಗದ ಗುಮಾಸ್ತರ ನೇಮಕಕ್ಕೆ ಮಂಜೂರಾತಿ ನೀಡಿದ್ದೇವೆ" ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದ್ದಾರೆ.

ಇಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿ ನಗರ ಸ್ಥಳೀಯ ಸಂಸ್ಥೆ ಪ್ರದೇಶ ಮತ್ತು ಬೆಂಗಳೂರು ನಗರದ ಎಲ್ಲಾ ವಾರ್ಡ್‌ಗಳಲ್ಲಿ ಕ್ಲಿನಿಕ್‌ಗಳನ್ನು ಪ್ರಾರಂಭಿಸಲಾಗುವುದು ಎಂದಿದ್ದಾರೆ.

### ಕಾಶಿ ಯಾತ್ರೆ ಮಾಡಿದ 30,000 ಮಂದಿಗೆ ತಲಾ 5,000 ರೂ. ಸಹಾಯಧನ

ಬಜೆಟ್‌ನಲ್ಲಿ ಘೋಷಿಸಿದಂತೆ 30 ಸಾವಿರ ಮಂದಿ ಕಾಶಿ ಯಾತ್ರಾರ್ಥಿಗಳಿಗೆ ಸಹಾಯಧನ ನೀಡಲು ರಾಜ್ಯ ಸರ್ಕಾರ ಮುಂದಾಗಿದೆ. ಕಾಶಿ ಯಾತ್ರೆ ಕೈಗೊಳ್ಳುವ 18 ವರ್ಷ ಮೇಲ್ಪಟ್ಟವರಿಗೆ ರಾಜ್ಯ ಸರ್ಕಾರದಿಂದ ರೂ. 5,000 ಸಹಾಯಧನ ನೀಡಲಾಗುವುದು ಎಂದು ಸರ್ಕಾರ ಹೇಳಿದೆ. ಏಪ್ರಿಲ್ 1 ರಿಂದ ಜೂನ್ 30ರ ನಡುವೆ ಈಗಾಗಲೇ ಕಾಶಿ ಯಾತ್ರೆ ಮಾಡಿದವರು ಸೂಕ್ತ ದಾಖಲೆ ಸಲ್ಲಿಸಿ ಸಹಾಯಧನ ಪಡೆಯಬಹುದು.



ಕಾಶಿಯಾತ್ರೆಗೆ ರಾಜ್ಯದ ಜನರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಬಜೆಟ್ ನಲ್ಲಿ ಘೋಷಿಸಲಾಗಿದ್ದ ಕಾಶಿಯಾತ್ರೆ ಯೋಜನೆಗೆ ಮಾರ್ಗಸೂಚಿ ಅಂತಿಮಗೊಳಿಸಲಾಗಿದೆ. ಏಪ್ರಿಲ್ 1ರಿಂದ ಪೂರ್ವಾನ್ವಯವಾಗುವಂತೆ 30,000 ಯಾತ್ರಾರ್ಥಿಗಳಿಗೆ ತಲಾ ಐದು ಸಾವಿರ ರೂಪಾಯಿ ನೀಡುವುದಾಗಿ ಆದೇಶದಲ್ಲಿ ತಿಳಿಸಲಾಗಿದೆ.

ಕರ್ನಾಟಕದ ಖಾಯಂ ನಿವಾಸಿಗಳು ಮಾತ್ರ ಧನಸಹಾಯ ಸೌಲಭ್ಯ ಪಡೆಯಲು ಅರ್ಹರಾಗಿದ್ದಾರೆ. ಇದಕ್ಕೆ ಪೂರಕವಾದ ಒಂದು ದಾಖಲೆಯನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗುತ್ತದೆ. ಕಾಶಿಯಾತ್ರೆ ಯೋಜನೆ ಜೊತೆಗೆ 'ಭಾರತ್ ಗೌರವ್' ಯೋಜನೆಯಡಿ ಕಾಶಿಯಾತ್ರೆಗೆ ವಿಶೇಷ ರೈಲು ವ್ಯವಸ್ಥೆ ಮಾಡಲು ಸಹ ಪ್ರಯತ್ನ ನಡೆಸಲಾಗುತ್ತಿದೆ. ಈಗಾಗಲೇ ರಾಜ್ಯ ಮುಜರಾಯಿ ಇಲಾಖೆಯು ಕೇಂದ್ರ ರೈಲ್ವೆ ಇಲಾಖೆಯ ಜೊತೆ ಚರ್ಚೆ ನಡೆಸಿದ್ದು ಶೀಘ್ರದಲ್ಲೇ ವಿಶೇಷ ರೈಲು ಕಾರ್ಯಾಚರಣೆ ಆರಂಭವಾಗಲಿದೆ ಎಂದು ಸಚಿವೆ ಶಶಿಕಲಾ ಜೊಲ್ಲೆ ಅವರು ಮಾಹಿತಿ ನೀಡಿದ್ದಾರೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th JULY 2022
REGISTERED NEWS PAPER RNI 36528/79 LICENSE TO POST
WITHOUT PREPAYMENT LICENSE NO PMG/BG/WPP-46/2021-2023 AT BENGALURU PSO
BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 15-07-2022



## ಚೀನಾದ ವಿವೋ ಸಂಸ್ಥೆಗೆ ಸಂಬಂಧಿಸಿದ 44 ಸ್ಥಳಗಳ ಮೇಲೆ ಇಡಿ ದಾಳಿ




ಚೀನಾದ ಸ್ಮಾರ್ಟ್‌ಫೋನ್ ತಯಾರಿಕಾ ಕಂಪನಿ ವಿವೊ ಮತ್ತು ಸಂಬಂಧಿತ ಸಂಸ್ಥೆಗಳ ವಿರುದ್ಧ ಅಕ್ರಮ ಹಣ ವರ್ಗಾವಣೆ ತನಿಖೆಯ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ (ಇಡಿ) ಮಂಗಳವಾರ ದೇಶಾದ್ಯಂತ 44 ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿ, ಉತ್ತರ ಪ್ರದೇಶ, ಮೇಘಾಲಯ, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳ ಸ್ಥಳಗಳಲ್ಲಿ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಸೆಕ್ಷನ್‌ಗಳ ಅಡಿಯಲ್ಲಿ ಶೋಧ ನಡೆಸಲಾಗುತ್ತಿದೆ. ಸಂಸ್ಥೆಯು ವಿವೋ ಮತ್ತು ಸಂಬಂಧಿತ ಕಂಪನಿಗಳಿಗೆ ಸಂಬಂಧಿಸಿದ 44 ಸ್ಥಳಗಳಲ್ಲಿ ಹುಡುಕಾಟ ನಡೆಸುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹಲವು ದೂರಗಳನ್ನು ಗಮನದಲ್ಲಿಟ್ಟುಕೊಂಡ ಇಡಿ ವಿವೋ ವಿರುದ್ಧ ಮನಿ ಲಾಂಡರಿಂಗ್ ಪ್ರಕರಣವನ್ನು ದಾಖಲಿಸಿದೆ. ವಿವೋ ಕಂಪನಿಯಲ್ಲಿನ ಕೆಲವು ಚೀನೀ ಷೇರುದಾರರು ತಮ್ಮ ಗುರುತಿನ ದಾಖಲೆಗಳನ್ನು ನಕಲಿ ಮಾಡಿದ್ದಾರೆ ಎಂದೂ ಆರೋಪಿಸಲಾಗಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಚೀನಾದ ಹಲವಾರು ಸ್ಮಾರ್ಟ್‌ಫೋನ್ ತಯಾರಕರು, ಅವರ ವಿತರಕರು ಮತ್ತು ಸಂಬಂಧಿತ ಸಹವರ್ತಿಗಳ ವಿರುದ್ಧ ಆದಾಯ ತೆರಿಗೆ ಇಲಾಖೆಯು ದೇಶಾದ್ಯಂತ ದಾಳಿ ನಡೆಸಿತು ಮತ್ತು 6,500 ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ಲೆಕ್ಕವಿಲ್ಲದ ಆದಾಯವನ್ನು ಪತ್ತೆ ಮಾಡಿತ್ತು.



## ಸಿನಿಮಾ ಪೋಸ್ಟರ್‌ನಲ್ಲಿ ಕಾಳಿದೇವಿಗೆ ಅವಮಾನ: ನೆಟ್ಟಿಗರ ಆಕ್ರೋಶ

ಹಿಂದೂ ದೇವರುಗಳಿಗೆ ಅವಹೇಳನ ಮಾಡುವುದನ್ನು ಬಾಲಿವುಡ್ ಮಂದಿ ತಮ್ಮ ಜನ್ಮಸಿದ್ಧ ಹಕ್ಕು ಎಂದು ಭಾವಿಸಿಕೊಂಡಂತಿದೆ. ತಾಂಡವ್, ಪಿಕೆ ಮುಂತಾದ ಸಿನಿಮಾಗಳ ಬಳಿಕ ಇದೀಗ ಮತ್ತೊಂದು ಸಿನಿಮಾದಲ್ಲಿ ಕಾಳಿ ದೇವಿಗೆ ಅವಮಾನ ಮಾಡಲಾಗಿದೆ. ನಿರ್ಮಾಪಕಿ ಲೀನಾ ಮಣಿಮೇಕಲೈ ಅವರು ನಿರ್ದೇಶಿಸಿದ ಸಾಕ್ಷ್ಯಚಿತ್ರದ ಪೋಸ್ಟರ್‌ನಲ್ಲಿ ಹಿಂದೂ ದೇವರಾದ ಕಾಳಿಗೆ ಅವಮಾನ ಮಾಡಲಾಗಿದೆ.

ಲೀನಾ ಇತ್ತೀಚೆಗೆ ತಮ್ಮ ಮುಂಬರುವ ಸಾಕ್ಷ್ಯಚಿತ್ರದ ಪೋಸ್ಟರ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ರಿದಮ್ಸ್ ಆಫ್ ಕೆನಡಾದ ಭಾಗವಾಗಿ ಆಗಾ ಖಾನ್ ಮ್ಯೂಸಿಯಂನಲ್ಲಿ ಇದನ್ನು ಪ್ರದರ್ಶಿಸಲಾಗಿದೆ. ಇದರಲ್ಲಿ ಕಾಳಿ ವೇಷ ಧರಿಸಿದ ಯುವತಿಯು ಸಿಗರೇಟು ಸೇವನೆ ಮಾಡುತ್ತಿದ್ದಾಳೆ. LGBT ಸಮುದಾಯದ ಧ್ವಜ ಕೂಡ ಇದರಲ್ಲಿ ಇದೆ.

ನೆಟ್ಟಿಗರನ್ನು ಕೆರಳಿಸಿರುವ ಪೋಸ್ಟರ್, ಲೀನಾ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದಾರೆ. ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿರುವ ಅವರ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿದ್ದಾರೆ. '#ArrestLeenaManimekal' ಎಂಬ ಹ್ಯಾಶ್‌ಟ್ಯಾಗ್ ಪ್ರಸ್ತುತ ಟ್ರೆಂಡಿಂಗ್ ಆಗಿದೆ.

## 102 ದೇಗುಲಗಳ ಯಾತ್ರೆಗಾಗಿ 'ಪಾವನ ಪಥ' ಯೋಜನೆ ಆರಂಭಿಸಲಿದ್ದಾರೆ ಮೋದಿ

ವಿಶ್ವನಾಥ ಕಾರಿಡಾರ್ ಮೂಲಕ ಕಾಶಿ ವಿಶ್ವನಾಥ ದೇಗುಲದ ಐತಿಹಾಸಿಕ ವಿಸ್ತರಣೆಯ ನಂತರ, ಪವಿತ್ರ ನಗರವಾದ ವಾರಣಾಸಿ ಅಭಿವೃದ್ಧಿಗೆ ಸಾಕ್ಷಿಯಾಗುತ್ತಿದೆ. 'ಪಾವನ ಪಥ' ಎಂಬ 102 ದೇವಾಲಯಗಳನ್ನು ಒಳಗೊಂಡಿರುವ ಧಾರ್ಮಿಕ ಪ್ರವಾಸೋದ್ಯಮ ಯೋಜನೆಯನ್ನು ಮೋದಿ ಸರ್ಕಾರ ಅನುಷ್ಠಾನಕ್ಕೆ ತರಳಿದೆ.

ಜುಲೈ 7ರಂದು ಪ್ರಧಾನಿ ನರೇಂದ್ರ ಮೋದಿ ಅವರು ಅಷ್ಟವಿನಾಯಕ, ವಿನಾಯಕ ಮತ್ತು ದ್ವಾದಶ ಜ್ಯೋತಿರ್ಲಿಂಗ ಯಾತ್ರೆಗಳಿಗೆ 12.52 ಕೋಟಿ ರೂಪಾಯಿ ಮೌಲ್ಯದ ಎರಡು ಪ್ಯಾಕೇಜ್‌ಗಳು ಮತ್ತು ಅಷ್ಟ ಭೈರವನ ಮತ್ತು ನವ ಗೌರಿ ಯಾತ್ರೆಗಳಿಗಾಗಿ ಪವನ್ ಪಥ ಯೋಜನೆಗೆ ಆರಂಭ ನೀಡಲಿದ್ದಾರೆ. ಪಾವನ್ ಪಥ ಯೋಜನೆಯಲ್ಲಿ ನಾಲ್ಕು ಪ್ಯಾಕೇಜ್‌ಗಳಿದ್ದು, ಈ ಯೋಜನೆಯ ಒಟ್ಟು ವೆಚ್ಚ 26 ಕೋಟಿ ರೂಪಾಯಿ. ಕಾಶಿಯ ಚಾರ್ ಧಾಮ್, ಕಾಶಿಯ ವಿಷ್ಣು ಮತ್ತು ದ್ವಾದಶ ಆದಿತ್ಯ ಯಾತ್ರೆ ಮತ್ತು ನವದುರ್ಗಾ ಯಾತ್ರೆ ಸೇರಿದಂತೆ ಎರಡು ಪ್ಯಾಕೇಜ್‌ಗಳ ಕೆಲಸವನ್ನು 2021–22ರಲ್ಲಿ ಪ್ರಾರಂಭಿಸಲಾಯಿತು. ಜುಲೈ 7ರಂದು ಪ್ರಧಾನಿ ಚಾಲನೆ ನೀಡುವುದರೊಂದಿಗೆ, ಕಾಶಿಯ ಭೈರವ್, ನವ ಗೌರಿ ಯಾತ್ರೆ, ವಿನಾಯಕ್ ಮತ್ತು ದ್ವಾದಶ ಜ್ಯೋತಿರ್ಲಿಂಗ್ ಯಾತ್ರೆ ಸೇರಿದಂತೆ ಪ್ಯಾಕೇಜ್‌ಗಳ ಕೆಲಸ ಪ್ರಾರಂಭವಾಗಲಿದೆ.

ಪಾವನ ಪಥ ಯೋಜನೆಯಡಿ ಭೈರವನ ಎಂಟು ದೇಗುಲಗಳು, ನವಗೌರಿ ಮತ್ತು ನವ ದುರ್ಗಾ ಯಾತ್ರೆಯ ಒಂಬತ್ತು, ಅಷ್ಟವಿನಾಯಕ ಯಾತ್ರೆ, ಅಷ್ಟ ಪ್ರಧಾನ ವಿನಾಯಕ ಯಾತ್ರೆ, ದ್ವಾದಶ ಜ್ಯೋತಿರ್ಲಿಂಗ ಯಾತ್ರೆ, ಕಾಶಿ ವಿಷ್ಣು ಯಾತ್ರೆ 2 ಸೇರಿದಂತೆ ಒಟ್ಟು 102 ದೇವಾಲಯಗಳು ಇರಲಿವೆ. ದ್ವಾದಶ ಆದಿತ್ಯ ಯಾತ್ರೆಯ ಕಾಶಿಯ ಚಾರ್ ಧಾಮ್ ಯಾತ್ರೆಯ ನಾಲ್ಕು ದೇವಾಲಯಗಳು ಮತ್ತು ಏಕಾದಶ ವಿನಾಯಕ ಯಾತ್ರೆಯ 11 ದೇವಾಲಯಗಳು ಇರುತ್ತವೆ.

ಈ ಎಲ್ಲಾ ಯಾತ್ರೆಗಳ ಮಾರ್ಗಗಳು ಹಾಗೂ ಯಾತ್ರೆಯ ಮಾರ್ಗಗಳಲ್ಲಿರುವ ದೇವಾಲಯಗಳಲ್ಲಿ ಯಾತ್ರಾರ್ಥಿಗಳು ಮತ್ತು ಸ್ಥಳೀಯ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಅವಕಾಶ ನೀಡುವುದು ಈ ಯೋಜನೆಯ ಉದ್ದೇಶವಾಗಿದೆ.

## ಕನ್ನಯ್ಯ ಲಾಲ್ ಕೊಲೆಗೆ ತಲ್ಲಣಿಸಿದ ದೇಶ



ರಾಜಸ್ಥಾನದ ಉದಯಪುರ್‌ನಲ್ಲಿ ನಡೆದ ಟೈಲರ್ ಕನ್ನಯ್ಯ ಲಾಲ್ ಅವರ ಕೊಲೆ ಇಡೀ ದೇಶವನ್ನು ತಲ್ಲಣಗೊಳಿಸಿದೆ. ಈ ಅಮಾನವೀಯ ಕೃತ್ಯ ವಿಡಿಯೋದಲ್ಲಿ ಸೆರೆಯಾಗಿದೆ.

ಈ ಕೃತ್ಯದ ಬಗ್ಗೆ ತನಿಖೆ ನಡೆಸುವ ಜವಾಬ್ದಾರಿಯನ್ನು ಕೇಂದ್ರ ಗೃಹಸಚಿವಾಲಯವು ರಾಷ್ಟ್ರೀಯ ತನಿಖಾ ದಳ (ಎನ್‌ಐಎ)ಕ್ಕೆ ವಹಿಸಿದೆ. ಈ ಬಗ್ಗೆ ಟ್ವೀಟ್ ಮಾಡಿರುವ ಕೇಂದ್ರ ಗೃಹ ಸಚಿವಾಲಯ, "ರಾಷ್ಟ್ರೀಯ ತನಿಖಾ ದಳವು ಕನ್ನಯ್ಯ ಲಾಲ್ ಅವರ ಕೊಲೆ ಪ್ರಕರಣವನ್ನು ತನಿಖೆ ನಡೆಸಲಿದೆ. ಪ್ರಕರಣದಲ್ಲಿ ಯಾವುದಾದರು ಸಂಘಟನೆ ಅಥವಾ ಅಂತರಾಷ್ಟ್ರೀಯ ಸಂಪರ್ಕಗಳ ಬಗ್ಗೆ ವಿಸ್ತೃತ ತನಿಖೆಯನ್ನು ನಡೆಸಲಾಗುತ್ತದೆ" ಎಂದಿದೆ.

ಕೊಲೆಯಲ್ಲಿ ಭಾಗಿಯಾದ ಕಟುಕರನ್ನು ಮಹಮ್ಮದ್ ಮತ್ತು ರಿಯಾಜ್ ಅಕ್ತಾರಿ ಎಂದು ಗುರುತಿಸಲಾಗಿದ್ದು, ಬಂಧನಕ್ಕೊಳಪಡಿಸಲಾಗಿದೆ. ಕನ್ನಯ್ಯ ಲಾಲ್ ಅವರ ಅಂಗಡಿಗೆ ಗ್ರಾಹಕರಂತೆ ಸೋಗು ಧರಿಸಿ ಬಂದು ಅಳತೆ ತೆಗೆಯುವ ಸಂದರ್ಭದಲ್ಲಿ ಕುತ್ತಿಗೆಯನ್ನು ಸೀಳಿ ಕೊಲೆ ಮಾಡಿದ್ದಾರೆ.

## ನೂಪುರ್ ಶರ್ಮಾ ಬಗ್ಗೆ ಸುಪ್ರೀಂ ಅವಲೋಕನದ ವಿರುದ್ಧ ಸಿಜೆಐಗೆ ಬಹಿರಂಗ ಪತ್ರ

ನೂಪುರ್ ಶರ್ಮಾ ವಿರುದ್ಧ ಸುಪ್ರೀಂಕೋರ್ಟ್‌ನ ಇತ್ತೀಚಿನ ಅವಲೋಕನಗಳನ್ನು ಮಾಜಿ ನ್ಯಾಯಾಧೀಶರು, ಅಧಿಕಾರಿಗಳು ಮತ್ತು ನಿವೃತ್ತ ಸಶಸ್ತ್ರ ಪಡೆಗಳ ಅಧಿಕಾರಿಗಳ ಗುಂಪು ಟೀಕಿಸಿದೆ. ಸಿಜೆಐ ಎನ್‌ವಿ ರಮಣ ಅವರಿಗೆ ಗುಂಪು ಬಹಿರಂಗ ಪತ್ರವನ್ನು ಕಳುಹಿಸಿದ್ದು, ಪತ್ರದಲ್ಲಿ ಸುಪ್ರೀಂಕೋರ್ಟ್ ನೂಪುರ್ ಶರ್ಮಾ ಅವರ ಪ್ರಕರಣದಲ್ಲಿ ಲಕ್ಷ್ಮಣ ರೇಖೆಯನ್ನು ಮೀರಿದೆ ಎಂದು ಆರೋಪಿಸಿದೆ ಮತ್ತು ತಪ್ಪನ್ನು ತುರ್ತು ಸರಿಪಡಿಸಬೇಕಾದ ಅಗತ್ಯವಿದೆ ಎಂದಿದೆ.

ಜುಲೈ 1ರಂದು ಸುಪ್ರೀಂಕೋರ್ಟ್ ನೂಪುರ್ ಶರ್ಮಾ ಅವರನ್ನು ಪ್ರವಾದಿ ಮೊಹಮ್ಮದ್ ಅವರ ಬಗ್ಗೆ ನೀಡಿದ ಹೇಳಿಕೆಗಳಿಗಾಗಿ ದೂಷಿಸಿತ್ತು. ಅವರ ಹೇಳಿಕೆಗಳು ಗೊಂದಲದ ಮತ್ತು ದುರಹಂಕಾರದ ಪರಮಾವಧಿ ಎಂದು ಹೇಳಿತ್ತು. ಪ್ರವಾದಿ ಮೊಹಮ್ಮದ್ ವಿರುದ್ಧದ ವಿವಾದಕ್ಕಾಗಿ ಆಕೆ ದೇಶದ ಕ್ಷಮೆಯಾಚನೆ ಮಾಡಬೇಕು ಎಂದಿತ್ತು. ಅವರ ಹೇಳಿಕೆ ದೇಶಕ್ಕೆ ಕಿಚ್ಚು ಹತ್ತಿಸಿದೆ ಎಂದಿತ್ತು. ಇದನ್ನು ಗುಂಪು ತೀವ್ರವಾಗಿ ಖಂಡಿಸಿದೆ.

ಸುಪ್ರೀಂಕೋರ್ಟ್‌ನಲ್ಲಿ ನೂಪುರ್ ಶರ್ಮಾ ಅವರ ಪ್ರಕರಣದ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೆ.ಬಿ. ಪರ್ದಿವಾಲಾ ಅವರು ಮಾಡಿದ ಅವಲೋಕನದ ವಿರುದ್ಧ 15 ನಿವೃತ್ತ ನ್ಯಾಯಾಧೀಶರು, 77 ನಿವೃತ್ತ ಅಧಿಕಾರಿಗಳು ಮತ್ತು 25 ನಿವೃತ್ತ ಸಶಸ್ತ್ರ ಪಡೆಗಳ ಅಧಿಕಾರಿಗಳ ಸಹಿ ಇರುವ ಬಹಿರಂಗ ಪತ್ರವನ್ನು ಸಿಜೆಐ ಎನ್.ವಿ. ರಮಣ ಅವರಿಗೆ ಕಳುಹಿಸಲಾಗಿದೆ.

ನ್ಯಾಯಮೂರ್ತಿ ಸೂರ್ಯಕಾಂತ್ ಅವರು ನಿವೃತ್ತಿಯಾಗುವವರೆಗೆ ಅವರ ರೋಸ್ಟರ್ ಅನ್ನು ಹಿಂಪಡೆಯಬೇಕು ಮತ್ತು ನೂಪುರ್ ಶರ್ಮಾ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ಅವರು ಮಾಡಿದ ಟೀಕೆಗಳು ಮತ್ತು ಅವಲೋಕನಗಳನ್ನು ಹಿಂತೆಗೆದುಕೊಳ್ಳುವಂತೆ ಸೂಚಿಸಬೇಕು ಎಂದು ಪತ್ರದಲ್ಲಿ ತಿಳಿಸಲಾಗಿದೆ. ಫೋರಮ್ ಫಾರ್ ಹ್ಯೂಮನ್ ರೈಟ್ಸ್ ಅಂಡ್ ಸೋಶಿಯಲ್ ಜಸ್ಟಿಸ್, ಜೆ & ಕೆ ಮತ್ತು ಲಡಾಖ್ ಅಟ್ ಜಮ್ಮು' ಎಂಬ ಸಂಘಟನೆಯಡಿ ಈ ಪತ್ರವನ್ನು ಬರೆಯಲಾಗಿದೆ.

## ಅಗ್ನಿಪಥ್ : 7,49,899 ಅರ್ಜಿಗಳನ್ನು ಸ್ವೀಕರಿಸಿದ ವಾಯುಸೇನೆ

ಭಾರತೀಯ ವಾಯುಪಡೆಯ ಹೊಸ ಅಗ್ನಿಪಥ್ ಯೋಜನೆಯಡಿ ನೋಂದಣಿ ಪ್ರಕ್ರಿಯೆಯು ಮಂಗಳವಾರ ಪೂರ್ಣಗೊಂಡಿದ್ದು, ನೇಮಕಾತಿಗಾಗಿ ದಾಖಲೆ ಸಂಖ್ಯೆಯ ಅರ್ಜಿಗಳನ್ನು ಸ್ವೀಕರಿಸಿದೆ.

ಕೇಂದ್ರವು ಅಗ್ನಿಪಥ್ ಯೋಜನೆಯನ್ನು ಪ್ರಾರಂಭಿಸಿದ 10 ದಿನಗಳ ನಂತರ ಜೂನ್ 24 ರಂದು ಐಎಎಫ್ ನೋಂದಣಿ ಪ್ರಕ್ರಿಯೆಯನ್ನು ಪ್ರಾರಂಭಿಸಿತ್ತು. ಐಎಎಫ್ ಪ್ರಕಾರ, ಇದುವರೆಗೆ ಯಾವುದೇ ನೇಮಕಾತಿಯಲ್ಲಿ ಸ್ವೀಕರಿಸಿದ ಅತ್ಯಧಿಕ ಸಂಖ್ಯೆಯ ಅರ್ಜಿಗಳು 6,31,528 ಆಗಿದ್ದು, ಈ ವರ್ಷ ಅಗ್ನಿಪಥ್ ಯೋಜನೆಯಡಿಯಲ್ಲಿ 7,49,899 ಅರ್ಜಿಗಳನ್ನು ಸ್ವೀಕರಿಸಲಾಗಿದೆ.

"ಐಎಎಫ್ ಅಗ್ನಿಪಥ್ ನೇಮಕಾತಿ ಯೋಜನೆಗಾಗಿ ನಡೆಸಿದ ಆನ್‌ಲೈನ್ ನೋಂದಣಿ ಪ್ರಕ್ರಿಯೆಯು ಪೂರ್ಣಗೊಂಡಿದೆ. ಈ ಹಿಂದೆ ಯಾವುದೇ ನೇಮಕಾತಿಗಿಂತ ಅತ್ಯಧಿಕ ಸಂಖ್ಯೆಯ ಅರ್ಜಿಗಳನ್ನು ಸ್ವೀಕರಿಸಲಾಗಿದೆ. 7,49,899 ಅರ್ಜಿಗಳನ್ನು ಸ್ವೀಕರಿಸಲಾಗಿದೆ" ಎಂದು ಐಎಎಫ್ ಮಂಗಳವಾರ ಟ್ವೀಟ್ ಮಾಡಿದೆ. ಹೊಸದಾಗಿ ಪ್ರಾರಂಭಿಸಲಾದ ಯೋಜನೆಯ ವಿರುದ್ಧ ದೇಶದ ವಿವಿಧ ಭಾಗಗಳಲ್ಲಿ ಪ್ರತಿಭಟನೆಗಳ ಹೊರತಾಗಿಯೂ ದಾಖಲೆ ಸಂಖ್ಯೆಯ ಅರ್ಜಿಗಳು ಬಂದಿವೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.